# ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು ವಿಶ್ವವಿದ್ಯಾನಿಲಯ ಕ್ರಾಫರ್ಡ್ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ದಿನಾಂಕ: 22-08-2022 ರಂದು ಪೂರ್ವಾಹ್ನ 11.30 ಗಂಟೆಗೆ ನಡೆದ "ಆರನೇ ಸಾಮಾನ್ಯ ಸಿಂಡಿಕೇಟ್ ಸಭೆ"ಯ ನಡವಳಿಗಳು.

<u>ಹಾಜರಿದ್ದ ಸದಸ್ಯರುಗಳು:</u>

| | | |
|---|---|---|
| 1. | ಪ್ರೊ. ಜಿ.ಹೇಮಂತಕುಮಾರ್ | ಕುಲಪತಿಗಳು ಹಾಗೂ ಅಧ್ಯಕ್ಷರು |
| 2. | ಪ್ರೊ. ಜಿ.ವೆಂಕಟೇಶ್ ಕುಮಾರ್ | ಸದಸ್ಯರು |
| 3. | ಪ್ರೊ. ಹೆಚ್.ರಾಜಶೇಖರ್ | ಸದಸ್ಯರು |
| 4. | ಶ್ರೀ ಎಂ.ಬಿ. ಗಪ್ಪಣ್ಣ | ಸದಸ್ಯರು |
| 5. | ಡಾ. ಚೈತ್ರ ನಾರಾಯಣ | ಸದಸ್ಯರು |
| 6. | ಡಾ. ಹೆಚ್.ಎಂ.ನಿರ್ಮಲ | ಸದಸ್ಯರು |
| 7. | ಶ್ರೀ ಹೆಚ್.ಎಸ್.ಗಂಗೇಗೌಡ | ಸದಸ್ಯರು |
| 8. | ಡಾ. ಜಿ.ಗೋವಿಂದರಾಜು | ಸದಸ್ಯರು |
| 9. | ಡಾ. ಕೆ.ವಿ.ಸುರೇಶ | ಸದಸ್ಯರು |
| 10. | ಶ್ರೀ ಆರ್.ಪ್ರದೀಪ್ ಕುಮಾರ್ ದೀಕ್ಷಿತ್ | ಸದಸ್ಯರು |
| 11. | ಶ್ರೀ ಎಸ್.ಡಿ.ದೊಡ್ಡಚಾರಿ | ಸದಸ್ಯರು |
| 12. | ಶ್ರೀಮತಿ ವೈ.ಕೆ.ಪವಿತ್ರ | ಸದಸ್ಯರು |
| 13. | ಡಾ. ಈ.ಸಿ.ನಿಂಗರಾಜ್ ಗೌಡ | ಸದಸ್ಯರು |
| 14. | ಡಾ. ಎಂ.ಎಸ್. ದಾಮೋದರ | ಸದಸ್ಯರು |
| 15. | ಪ್ರೊ. ಎ.ಪಿ. ಜ್ಞಾನ ಪ್ರಕಾಶ್, ಕುಲಸಚಿವರು (ಪರೀಕ್ಷಾಂಗ) | ಸದಸ್ಯರು |
| 16. | ಪ್ರೊ. ಆರ್.ಶಿವಪ್ಪ | ಕುಲಸಚಿವ ಹಾಗೂ ಸದಸ್ಯ ಕಾರ್ಯದರ್ಶಿ |
| 17. | ಡಾ. ಸಂಗೀತಾ ಗಜಾನನ್ ಭಟ್, ಹಣಕಾಸು ಅಧಿಕಾರಿಗಳು | ವಿಶೇಷ ಆಹ್ವಾನಿತರು |

<u>ಹಾಜರಾಗದ ಸದಸ್ಯರು:</u>

1. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
2. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
3. ಡಾ. ಸೈಯದ್ ಕಾಝು ಮೊಹಿದ್ದೀನ್
4. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
5. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
6. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.

ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಸಭೆಗೆ ಹಾಜರಿದ್ದ ಸದಸ್ಯರುಗಳನ್ನು ಹುತ್ಪೂರ್ವಕವಾಗಿ ಸಭೆಗೆ ಸ್ವಾಗತಿಸಿದರು.

ಮೊದಲಿಗೆ, ಹೊಸದಾಗಿ ಸಿಂಡಿಕೇಟ್ ಸದಸ್ಯರಾಗಿರುವ ಈ ಕೆಳಕಂಡವರುಗಳನ್ನು ಸಭೆಗೆ ಸ್ವಾಗತಿಸಲಾಯಿತು.

1) ಡಾ. ನಿರ್ಮಲ, ಪ್ರಾಂಶುಪಾಲರು, ಸೇವಾ ಭಾರತಿ ಪ್ರಥಮ ದರ್ಜೆ ಕಾಲೇಜು, ಶಂಕರಪುರ 2ನೇಕ್ರಾಸ್, ಶ್ರೀ ರಾಘವೇಂದ್ರಸ್ವಾಮಿ ಮಠದ ಹತ್ತಿರ ಭ್ರಮರಾಂಭ ಬಡಾವಣೆ, ಚಾಮರಾಜನಗರ.

2) ಹೊಸದಾಗಿ ಸಿಂಡಿಕೇಟ್ ಸದಸ್ಯರಾಗಿರುವ ಶ್ರೀ ಹೆಚ್. ಎಸ್. ಗಂಗೇಗೌಡ, ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಚನ್ನರಾಯಪಟ್ಟಣ, ಹಾಸನ.

ಹಾಗೂ

ಇದುವರೆವಿಗೂ ಸಿಂಡಿಕೇಟ್ ಸದಸ್ಯರಾಗಿ ಕಾರ್ಯನಿರ್ವಹಿಸಿರುವ ಈ ಕೆಳಕಂಡವರುಗಳ ಸೇವೆಯನ್ನು ಸ್ಮರಿಸಿ ದಾಖಲಿಸಲಾಯಿತು.

1) ಡಾ. ವೆಂಕಟೇಶಯ್ಯ, ಪ್ರಾಂಶುಪಾಲರು, ಶ್ರೀ ದೇವರಾಜು ಅರಸು ಪ್ರಥಮ ದರ್ಜೆ ಕಾಲೇಜು, ಹುಣಸೂರು ಮೈಸೂರು ಜಿಲ್ಲೆ.
2) ಡಾ. ನಾಗರಾಜು, ಪ್ರಾಂಶುಪಾಲರು, ಬಿಜಿಎಸ್ ಬಿ.ಇಡಿ. ಕಾಲೇಜು, ಆದಿಚುಂಚನಗಿರಿ ರಸ್ತೆ, ಕುವೆಂಪು ನಗರ, ಮೈಸೂರು.

| ವಿಷಯ ಸಂಖ್ಯೆ | ವಿಷಯ ಸಂಕ್ಷಿಪ್ತವಾಗಿ |
|---|---|
| ದಿನಾಂಕ: 18-06-2022ರಂದು ಜರುಗಿದ "ಸಿಂಡಿಕೇಟ್ ವಿಶೇಷ ಸಭೆ"ಯ ಹಾಗೂ ದಿನಾಂಕ: ಜರುಗಿದ "ಐದನೇ ಸಾಮಾನ್ಯ ಸಿಂಡಿಕೇಟ್ ಸಭೆ"ಯ ನಡವಳಿಗಳನ್ನು ದೃಢೀಕರಿಸುವ ಬಗ್ಗೆ. | |
| ದಿನಾಂಕ: 18-06-2022ರಂದು ಜರುಗಿದ "ಸಿಂಡಿಕೇಟ್ ವಿಶೇಷ ಸಭೆ"ಯ ಹಾಗೂ ದಿನಾಂಕ: 11-07-2022ರಂದು ಜರುಗಿದ "ಐದನೇ ಸಾಮಾನ್ಯ ಸಿಂಡಿಕೇಟ್ ಸಭೆ"ಯ ನಡವಳಿಗಳನ್ನು ದೃಢೀಕರಿಸಲಾಯಿತು. | |
| ಸಾಮಾನ್ಯ ಸಭೆ 2022/6.1 | ಇನ್ಸ್‌ಟಿಟ್ಯೂಟ್ ಆಫ್ ಫೈನಾನ್ಸ್ ಅಂಡ್ ಇಂಟರ್‌ನ್ಯಾಷನಲ್ ಮ್ಯಾನೇಜ್‌ಮೆಂಟ್ (ಐ.ಎಫ್.ಐ.ಎಂ.) (ಸ್ವಾಯತ್ತ), ಬೆಂಗಳೂರು ಇವರಿಗೆ ಹೊಸದಾಗಿ Economics Commerce and Management ವಿಷಯದಲ್ಲಿ ಪಿಎಚ್.ಡಿ ಸಂಶೋಧನೆ ನಡೆಸಲು ವಿಶ್ವವಿದ್ಯಾನಿಲಯದಿಂದ ಸಂಶೋಧನಾ ಕೇಂದ್ರದ ಮಾನ್ಯತೆ ಕೋರಿರುವ ಸಂಬಂಧ ಪರಿವೀಕ್ಷಣಾ ಸಮಿತಿ ಸಲ್ಲಿಸಿರುವ ವರದಿಗೆ ಅನುಮೋದನೆ ಕೋರುವ ಬಗ್ಗೆ. |
| ತೀರ್ಮಾನ | ಪರಿವೀಕ್ಷಣಾ ಸಮಿತಿಯ ಶಿಫಾರಸ್ಸಿನನ್ವಯ ಮತ್ತು "The University of Mysore-Recognition of Certain institutions for specified studies/specialized and Research Studies 2008" ಅಧಿನಿಯಮದಲ್ಲಿರುವ ಅವಕಾಶದನುಸಾರ ಇನ್ಸ್‌ಟಿಟ್ಯೂಟ್ ಆಫ್ ಫೈನಾನ್ಸ್ ಅಂಡ್ ಇಂಟರ್‌ನ್ಯಾಷನಲ್ ಮ್ಯಾನೇಜ್‌ಮೆಂಟ್ (ಐ. ಎಫ್.ಐ.ಎಂ.) (ಸ್ವಾಯತ್ತ), ನಂ. 8ಪಿ & 9ಪಿ, ಬೆಂಗಳೂರು ಇವರು ಹೊಸದಾಗಿ Economics Commerce and Management ವಿಷಯಗಳಲ್ಲಿ ಪಿಹೆಚ್.ಡಿ. ಸಂಶೋಧನೆ ನಡೆಸಲು ವಿಶ್ವವಿದ್ಯಾನಿಲಯದಿಂದ ಸಂಶೋಧನಾ ಕೇಂದ್ರದ ಮಾನ್ಯತೆ ನೀಡಲು ಸಭೆಯು ತೀರ್ಮಾನಿಸಿತು. |
| ಸಾಮಾನ್ಯ ಸಭೆ 2022/6.2 | Krupanidhi Group of Institutions, ಬೆಂಗಳೂರು ಇವರ ಸಂಸ್ಥೆಯಲ್ಲಿ Commerce Management, Computer Science ಮತ್ತು Micobiology ವಿಷಯಗಳಲ್ಲಿ ಹೊಸದಾಗಿ ಸಂಶೋಧನಾ ಕಾರ್ಯ ಕೈಗೊಳ್ಳಲು ವಿಶ್ವವಿದ್ಯಾನಿಲಯದ ಮಾನ್ಯತೆ ಕೋರಿದ್ದ ಸಂಬಂಧ ವಿಶ್ವವಿದ್ಯಾನಿಲಯದ ಪರಿವೀಕ್ಷಣಾ ಸಮಿತಿಯು ಸಲ್ಲಿಸಿರುವ ವರದಿಗೆ ಅನುಮೋದನೆ ಕೋರುವ ಬಗ್ಗೆ. |
| ತೀರ್ಮಾನ | ಪರಿವೀಕ್ಷಣಾ ಸಮಿತಿಯ ಶಿಫಾರಸ್ಸಿನನ್ವಯ ಮತ್ತು "The University of Mysore-Recognition of Certain institutions for specified studies/specialized and Research Studies 2008" ಅಧಿನಿಯಮದಲ್ಲಿರುವ ಅವಕಾಶದನುಸಾರ Krupanidhi Group of Institutions, ನಂ.12/1, ಚಿಕ್ಕಬೆಳ್ಳಂದೂರು, ಕಾರ್ಮೆಲರಾಮ್ ಪೋಸ್ಟ್, ವರ್ತೂರು ಹೋಬಳಿ, ಸರ್ಜಾಪುರ ರಸ್ತೆ, ಬೆಂಗಳೂರು ಸಂಸ್ಥೆಗೆ Commerce Management, Computer Science ಮತ್ತು Micobiology ವಿಷಯಗಳಲ್ಲಿ ಹೊಸದಾಗಿ ಸಂಶೋಧನಾ ಕಾರ್ಯ ಕೈಗೊಳ್ಳಲು ವಿಶ್ವವಿದ್ಯಾನಿಲಯದಿಂದ ಮಾನ್ಯತೆ ನೀಡಲು ಸಭೆಯು ತೀರ್ಮಾನಿಸಿತು. |

| | |
|---|---|
| ಸಾಮಾನ್ಯ ಸಭೆ 2022/6.3 | ಆಚಾರ್ಯ ಇನ್ಸ್‌ಟಿಟ್ಯೂಟ್ ಫಾರ್ ಇನೋವೇಷನ್ ಅಂಡ್ ಟ್ರಾನ್ಸ್‌ಫಾರ್ಮೇಶನ್, ಎಂ.ಐ.ಟಿ. ಕ್ಯಾಂಪಸ್, ಬೆಳವಾಡಿ, ಮಂಡ್ಯ ಜಿಲ್ಲೆ ಇವರು Specialized Programme ಅಡಿಯಲ್ಲಿ ಕೋರಿರುವ ಹೆಚ್ಚುವರಿ ಕೋರ್ಸುಗಳ ಸಂಬಂಧ ಪರಿವೀಕ್ಷಣಾ ಸಮಿತಿ ಸಲ್ಲಿಸಿರುವ ವರದಿಯ ಬಗ್ಗೆ. |
| ತೀರ್ಮಾನ | ಪರಿವೀಕ್ಷಣಾ ಸಮಿತಿಯ ಶಿಫಾರಸ್ಸಿನನ್ವಯ ಮತ್ತು "The University of Mysore-Recognition of Certain institutions for specified studies/specialized and Research Studies 2008" ಅಧಿನಿಯಮದಲ್ಲಿರುವ ಅವಕಾಶದನುಸಾರ ಆಚಾರ್ಯ ಇನ್ಸ್‌ಟಿಟ್ಯೂಟ್ ಫಾರ್ ಇನೋವೇಷನ್ ಅಂಡ್ ಟ್ರಾನ್ಸ್‌ಫಾರ್ಮೇಶನ್, ಎಂ.ಐ.ಟಿ. ಕ್ಯಾಂಪಸ್, ಬೆಳವಾಡಿ, ಮಂಡ್ಯ ಜಿಲ್ಲೆ ಇವರು ಈಗಾಗಲೇ ವಿಶ್ವವಿದ್ಯಾನಿಲಯದಿಂದ Specialized Programme ಅಡಿಯಲ್ಲಿ ಮಾನ್ಯತೆ ಪಡೆದು ನಡೆಸುತ್ತಿರುವ ಕೋರ್ಸ್‌ಗಳ ಜೊತೆಗೆ ಹೆಚ್ಚುವರಿಯಾಗಿ 1) B.Des. (Hons.) (Vedic Architecture, 2) BCA (Hons.) (Artificial Intelligence & Machine Learning) and 3) BCA (Hons.) (Cyber Security & Data Science) ಪ್ರತಿ ಕೋರ್ಸಿಗೆ 40 ಪ್ರವೇಶಾತಿ ಮಿತಿಯೊಂದಿಗೆ 2022-23ನೇ ಶೈಕ್ಷಣಿಕ ಸಾಲಿನಿಂದ ಪ್ರಾರಂಭಿಸಲು ಅನುಮತಿಸಿ ಅಧಿಸೂಚನೆ ಹೊರಡಿಸಿರುವುದನ್ನು ಸಭೆಯು ಅನುಸಮರ್ಥಿಸಿತು. |
| ಸಾಮಾನ್ಯ ಸಭೆ 2022/6.4 | ವಿಶ್ವವಿದ್ಯಾನಿಲಯದಿಂದ ಸಂಶೋಧನಾ ಕೇಂದ್ರದ ಮಾನ್ಯತೆ ಪಡೆದಿರುವ ಏಷ್ಯಾ ಫೆಸಿಫಿಕ್ ಇನ್ಸ್‌ಟಿಟ್ಯೂಟ್ ಆಫ್ ಎಂಬ್ರಿಯಾಲಜಿ, ದಟ್ಟಗಳ್ಳಿ, ಮೈಸೂರು ಇವರು ವಿಳಾಸ ಬದಲಾವಣೆ ಕೋರಿದ್ದ ಸಂಬಂಧ ಪರಿವೀಕ್ಷಣಾ ಸಮಿತಿ ಸಲ್ಲಿಸಿರುವ ವರದಿಯ ಬಗ್ಗೆ. |
| ತೀರ್ಮಾನ | ಪರಿವೀಕ್ಷಣಾ ಸಮಿತಿಯು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿರುವ ಶಿಫಾರಸ್ಸು ಪರಿಶೀಲಿಸಿದ ಸಭೆಯು ಏಷ್ಯಾ ಫೆಸಿಫಿಕ್ ಇನ್ಸ್‌ಟಿಟ್ಯೂಟ್ ಆಫ್ ಎಂಬ್ರಿಯಾಲಜಿ, # 149, 80ft. ಮುಖ್ಯ ರಸ್ತೆ, 3ನೇ ಹಂತ, ದಟ್ಟಗಳ್ಳಿ, ಮೈಸೂರು-570 022 ಸಂಸ್ಥೆಯ ವಿಳಾಸವನ್ನು # 12246/ಎ, ವಿಜಯನಗರ 4ನೇ ಹಂತ, 2ನೇ ಪೇಸ್, ಔಟರ್ ರಿಂಗ್ ರಸ್ತೆ, ಮೈಸೂರು-570 017 ಇಲ್ಲಿಗೆ ಬದಲಾವಣೆ ಮಾಡಿಕೊಳ್ಳಲು ಅನುಮತಿಸಿತು. |
| ಸಾಮಾನ್ಯ ಸಭೆ 2022/6.5 | ನ್ಯಾಷನಲ್ ಇನ್ಸ್‌ಟಿಟ್ಯೂಟ್ ಆಫ್ ಅಡ್ವಾನ್ಸ್ ಸ್ಟಡೀಸ್ (NIAS), ಬೆಂಗಳೂರು ಸಂಶೋಧನಾ ಕೇಂದ್ರವನ್ನು ಮುಕ್ತಾಯಗೊಳಿಸಲು ಅನುಮತಿ ಕೋರಿರುವ ಬಗ್ಗೆ. |
| | ನ್ಯಾಷನಲ್ ಇನ್ಸ್‌ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಸ್ಟಡೀಸ್ (NIAS), ಬೆಂಗಳೂರು ಸಂಸ್ಥೆಯಲ್ಲಿ ಸಂಶೋಧನಾ ಕಾರ್ಯ ಕೈಗೊಂಡಿರುವ ಹೆಚ್ಚಿನ ಡಾಕ್ಟರೇಟ್ ವಿದ್ಯಾರ್ಥಿಗಳು ತಮ್ಮ ಡಾಕ್ಟರೇಟ್ ಪದವಿ ಪ್ರಮಾಣ ಪತ್ರಗಳಲ್ಲಿ ವಿಷಯವಾರು ನಮೂದಿಸುವ ಬದಲು ಪ್ರಬಂಧ ಶೀರ್ಷಿಕೆಗಳನ್ನು ಮಾತ್ರ ನಮೂದಿಸಲು ಇಚ್ಛಿಸುತ್ತಾರೆ. ಮೈಸೂರು ವಿಶ್ವವಿದ್ಯಾನಿಲಯವು ಪ್ರದಾನ ಮಾಡುವ ಪದವಿ ಪ್ರಮಾಣ ಪತ್ರಗಳು ಮಾನದಂಡವಾಗಿದ್ದು, ಈ ಬದಲಾವಣೆ ಮಾಡಲು ವಿಶ್ವವಿದ್ಯಾನಿಲಯವು ಒಪ್ಪದಿರುವುದರಿಂದ ಹಾಗೂ ನ್ಯಾಷನಲ್ ಇನ್ಸ್‌ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಸ್ಟಡೀಸ್ (NIAS), ಬೆಂಗಳೂರು ಸಂಸ್ಥೆಯು ಒಳಪಟ್ಟಿರುವ ಭೌಗೋಳಿಕ ವ್ಯಾಪ್ತಿಯಲ್ಲಿನ ಬೆಂಗಳೂರು ಕೇಂದ್ರೀಯ ವಿಶ್ವವಿದ್ಯಾನಿಲಯದಿಂದ ನಿರಾಕ್ಷೇಪಣಾ ಪತ್ರವನ್ನು ಪಡೆಯಲು ಸಾಧ್ಯವಾಗದ ಹಿನ್ನೆಲೆಯಲ್ಲಿ ನೀಡಲಾಗಿದ್ದ ಸಂಶೋಧನಾ ಕೇಂದ್ರದ ಮಾನ್ಯತೆಯನ್ನು 2021-22ನೇ ಸಾಲಿನಿಂದ ಜಾರಿಗೆ ಬಂದಂತೆ ಮುಕ್ತಾಯಗೊಳಿಸಲು ಕೋರಿರುತ್ತಾರೆ. |
| ತೀರ್ಮಾನ | ನ್ಯಾಷನಲ್ ಇನ್ಸ್‌ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಸ್ಟಡೀಸ್ (NIAS), ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಸೈನ್ಸ್ ಕ್ಯಾಂಪಸ್, ಬೆಂಗಳೂರು ಇವರಿಗೆ ನೀಡಲಾಗಿದ್ದ ಸಂಶೋಧನಾ ಕೇಂದ್ರದ ಮಾನ್ಯತೆಯನ್ನು 2021-22ನೇ ಸಾಲಿನಿಂದ ಜಾರಿಗೆ ಬಂದಂತೆ ಮುಕ್ತಾಯಗೊಳಿಸಲು ಸಭೆಯು ಸಮ್ಮತಿಸಿತು. |

| | |
|---|---|
| ಸಾಮಾನ್ಯ ಸಭೆ 2022/6.6 | ವಿಶ್ವವಿದ್ಯಾನಿಲಯದಿಂದ Specialized Programme ಅಡಿಯಲ್ಲಿ ಸಂಶೋಧನಾ ಕೇಂದ್ರದ ಮಾನ್ಯತೆ ಪಡೆದಿರುವ ಏಷ್ಯಾ ಫೆಸಿಫಿಕ್ ಇನ್‌ಸ್ಟಿಟ್ಯೂಟ್ ಆಫ್ ಎಂಬ್ರಿಯಾಲಜಿ, ದಟ್ಟಗಳ್ಳಿ, ಮೈಸೂರು ಇವರು ವಿಳಾಸ ಬದಲಾವಣೆ ಕೋರಿದ್ದ ಸಂಬಂಧ ಪರಿವೀಕ್ಷಣಾ ಸಮಿತಿ ಸಲ್ಲಿಸಿರುವ ವರದಿಯ ಬಗ್ಗೆ. |
| ತೀರ್ಮಾನ | ಪರಿವೀಕ್ಷಣಾ ಸಮಿತಿಯು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿರುವ ಶಿಫಾರಸ್ಸು ಪರಿಶೀಲಿಸಿದ ಸಭೆಯು ಈಗಾಗಲೇ ವಿಶ್ವವಿದ್ಯಾನಿಲಯದಿಂದ Specialized Programme ಅಡಿಯಲ್ಲಿ ಸಂಶೋಧನಾ ಕೇಂದ್ರದ ಮಾನ್ಯತೆ ಪಡೆದಿರುವ ಏಷ್ಯಾ ಫೆಸಿಫಿಕ್ ಇನ್‌ಸ್ಟಿಟ್ಯೂಟ್ ಆಫ್ ಎಂಬ್ರಿಯಾಲಜಿ, # 149, 80ft. ಮುಖ್ಯ ರಸ್ತೆ, 3ನೇ ಹಂತ, ದಟ್ಟಗಳ್ಳಿ, ಮೈಸೂರು-570 017 ಸಂಸ್ಥೆಯ ವಿಳಾಸವನ್ನು # 12246/ಎ, ವಿಜಯನಗರ 4ನೇ ಹಂತ, 2ನೇ ಫೇಸ್, ಔಟರ್ ರಿಂಗ್ ರಸ್ತೆ, ಮೈಸೂರು-570 022 ಇಲ್ಲಿಗೆ ಬದಲಾವಣೆ ಮಾಡಿಕೊಳ್ಳಲು ಅನುಮತಿಸಿತು. |
| ಸಾಮಾನ್ಯ ಸಭೆ 2022/6.7 | Defence Food Research Laboratory (DFRL), Siddarthanagara, Mysuru ಇವರು ಪಿಹೆಚ್.ಡಿ ಸಂಶೋಧನೆ ನಡೆಸಲು ಕೋರಿರುವ ಹೆಚ್ಚುವರಿ ವಿಷಯದ ಸಂಬಂಧ ಪರಿವೀಕ್ಷಣಾ ಸಮಿತಿ ಸಲ್ಲಿಸಿರುವ ವರದಿಗೆ ಅನುಮೋದನೆ ಕೋರುವ ಬಗ್ಗೆ. |
| ತೀರ್ಮಾನ | ಪರಿವೀಕ್ಷಣಾ ಸಮಿತಿಯ ಶಿಫಾರಸ್ಸಿನನ್ವಯ ಮತ್ತು "The University of Mysore-Recognition of Certain institutions for specified studies/specialized and Research Studies 2008" ಅಧಿನಿಯಮದಲ್ಲಿರುವ ಅವಕಾಶದನುಸಾರ Defence Food Research Laboratory (DFRL), Siddarthanagara, Mysuru ಸಂಸ್ಥೆಯು ಈಗಾಗಲೇ ವಿಶ್ವವಿದ್ಯಾನಿಲಯದಿಂದ ಸಂಶೋಧನಾ ಮಾನ್ಯತೆ ಪಡೆದು ನಡೆಸುತ್ತಿರುವ ವಿಷಯಗಳೊಂದಿಗೆ Polymer Science ವಿಷಯದಲ್ಲಿಯೂ ಸಂಶೋಧನಾ ಕಾರ್ಯ ಕೈಗೊಳ್ಳಲು ವಿಶ್ವವಿದ್ಯಾನಿಲಯದಿಂದ ಮಾನ್ಯತೆ ನೀಡಲು ಸಭೆಯು ಅನುಮತಿಸಿತು. |
| ಸಾಮಾನ್ಯ ಸಭೆ 2022/6.8 | ಶ್ರೀ ಗಣೇಶ್.ಆರ್, ದ್ವಿತೀಯ ದರ್ಜೆ ಸಹಾಯಕರು, ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಸ್ವಯಂ ನಿವೃತ್ತಿ ಪಡೆಯಲು ಸಲ್ಲಿಸಿರುವ ಮನವಿಯನ್ನು ರದ್ದುಪಡಿಸುವ ಕುರಿತು. |
| ತೀರ್ಮಾನ | ಶ್ರೀ ಗಣೇಶ್.ಆರ್, ದ್ವಿತೀಯ ದರ್ಜೆ ಸಹಾಯಕರು, ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಸ್ವಯಂ ನಿವೃತ್ತಿ ಪಡೆಯಲು ಸಲ್ಲಿಸಿದ್ದ ಮನವಿಯನ್ನು ರದ್ದುಪಡಿಸಲು ಸಭೆಯು ಸಮ್ಮತಿಸಿತು. |
| ಸಾಮಾನ್ಯ ಸಭೆ 2022/6.9 | "ಬೌದ್ಧ ಅಧ್ಯಯನ ಕೇಂದ್ರ"ವನ್ನು ಸ್ಥಾಪಿಸುವುದರ ಬಗ್ಗೆ. |
| ತೀರ್ಮಾನ | "ಬೌದ್ಧ ಅಧ್ಯಯನ ಕೇಂದ್ರ"ವನ್ನು ಸ್ಥಾಪಿಸುವುದರ ಸಂಬಂಧ ಪ್ರಸ್ತುತ ಸಿದ್ಧಪಡಿಸಲಾಗಿರುವ ಪರಿಷ್ಕೃತ ಪ್ರಸ್ತಾವನೆಯೊಂದಿಗೆ ಕೇಂದ್ರದ ಕಾರ್ಯಕ್ರಮಗಳ ಚಟುವಟಿಕೆಗಳು, ಗುರಿಗಳು ಹಾಗೂ ಉದ್ದೇಶಗಳನ್ನೊಳಗೊಂಡಿರುವ ಪೂರ್ಣ ಪ್ರಮಾಣದ ವಿವರದೊಂದಿಗೆ ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಬೇಕೆಂದು ಸಭೆಯು ನಿರ್ಧರಿಸಲಾಯಿತು. |
| ಸಾಮಾನ್ಯ ಸಭೆ 2022/6.10 | ಮೈಸೂರು ವಿಶ್ವವಿದ್ಯಾನಿಲಯದ ಅಭಿವೃದ್ಧಿ ಅಧ್ಯಯನ ಸಂಸ್ಥೆಯಲ್ಲಿ ಸ್ಥಾಪಿಸಲಾಗಿರುವ ಶ್ರೀ ದೇವರಾಜ ಅರಸು ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರು/ವಿಷಯ ತಜ್ಞರನ್ನು ಆಹ್ವಾನಿಸುವ ಬಗ್ಗೆ. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದ ಅಭಿವೃದ್ಧಿ ಅಧ್ಯಯನ ಸಂಸ್ಥೆಯಲ್ಲಿ ಸ್ಥಾಪಿಸಲಾಗಿರುವ ಶ್ರೀ ದೇವರಾಜ ಅರಸು ಪೀಠಕ್ಕೆ ಸಂದರ್ಶಕ ಪ್ರಾಧ್ಯಾಪಕರು/ವಿಷಯ ತಜ್ಞರನ್ನು |

<table>
<tr><td></td><td>ಆಹ್ವಾನಿಸುವ ಬಗ್ಗೆ ಸದರಿ ಸಭೆಯಲ್ಲಿ ಮಂಡಿಸಿರುವ ಮೂವರು ಸಂದರ್ಶಕ ಪ್ರಾಧ್ಯಾಪಕರು/ವಿಷಯ ತಜ್ಞರುಗಳ ಹೆಸರಿನ ಬದಲು ಪರಿಷ್ಕೃತ ಮೂವರು ಸಂದರ್ಶಕ ಪ್ರಾಧ್ಯಾಪಕರು/ವಿಷಯ ತಜ್ಞರಗಳ ಹೆಸರನ್ನು ಶಿಫಾರಸ್ಸು ಮಾಡಿ, ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಈ ವಿಷಯವನ್ನು ಮಂಡಿಸಬೇಕೆಂದು ಸಭೆಯಲ್ಲಿ ನಿರ್ಧರಿಸಲಾಯಿತು.</td></tr>
<tr><td>ಸಾಮಾನ್ಯ ಸಭೆ<br>2022/6.11</td><td>ಮೈಸೂರು ವಿಶ್ವವಿದ್ಯಾನಿಲಯದ ಅರ್ಥಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇಲ್ಲಿ ಸ್ಥಾಪಿಸಲಾಗಿರುವ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಪೀಠದ ಸಂದರ್ಶಕ ಪ್ರಾಧ್ಯಾಪಕರನ್ನು ಮುಂದಿನ ಒಂದು ವರ್ಷದ ಅವಧಿಗೆ ಹೊಸದಾಗಿ ಆಹ್ವಾನಿಸುವ ಬಗ್ಗೆ.</td></tr>
<tr><td>ತೀರ್ಮಾನ</td><td>ಮೈಸೂರು ವಿಶ್ವವಿದ್ಯಾನಿಲಯದ ಅರ್ಥಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇಲ್ಲಿ ಸ್ಥಾಪಿಸಲಾಗಿರುವ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಪೀಠದ ಸಂದರ್ಶಕ ಪ್ರಾಧ್ಯಾಪಕರನ್ನು ಮುಂದಿನ ಒಂದು ವರ್ಷದ ಅವಧಿಗೆ ಮಾನ್ಯ ಕುಲಪತಿಯವರ ವಿವೇಚನಾನುಸಾರ ನೇಮಕ ಮಾಡುವುದಕ್ಕೆ ಸಭೆಯು ಅನುಮತಿಸಿತು.</td></tr>
<tr><td>ಸಾಮಾನ್ಯ ಸಭೆ<br>2022/6.12</td><td>ಹಿರಿಯ ಪ್ರಾಧ್ಯಾಪಕ ಹುದ್ದೆಗೆ (Academic Level 15) ಸಿ.ಎ.ಎಸ್ ಅಡಿಯಲ್ಲಿ ಪದೋನ್ನತಿ ನೀಡುವ ಬಗ್ಗೆ.</td></tr>
<tr><td>ತೀರ್ಮಾನ</td><td>ಯುಜಿಸಿ 2018ರ ರೆಗ್ಯುಲೇಷನ್ ಅನ್ವಯ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರುಗಳಿಗೆ ಸಿ.ಎ.ಎಸ್ ಅಡಿಯಲ್ಲಿ ಹಿರಿಯ ಪ್ರಾಧ್ಯಾಪಕರಾಗಿ ಪದೋನ್ನತಿಯನ್ನು (ಶೈಕ್ಷಣಿಕ ಹಂತ 15) ಯುಜಿಸಿ ಸೂಚಿತ ಪ್ರಕ್ರಿಯೆಗಳನ್ನು ಅನುಸರಿಸಿ ನೀಡಲು ಸಭೆಯು ಅನುಮೋದಿಸಿತು.</td></tr>
<tr><td>ಸಾಮಾನ್ಯ ಸಭೆ<br>2022/6.13</td><td>ಅಧಿಕಾರಿ/ಅಧ್ಯಾಪಕೇತರ ಉದ್ಯೋಗಿಗಳು ಈಗಾಗಲೇ ವಿದೇಶಕ್ಕೆ ತೆರಳಲು ಅನುಮತಿ ನೀಡಿರುವ ಬಗ್ಗೆ.</td></tr>
<tr><td>ತೀರ್ಮಾನ</td><td>ಮೈಸೂರು ವಿಶ್ವವಿದ್ಯಾನಿಲಯದ ಈ ಕೆಳಕಂಡ ಅಧಿಕಾರಿ ಮತ್ತು ಉದ್ಯೋಗಿಗಳು ವೈಯಕ್ತಿಕವಾಗಿ ಅವರುಗಳ ಹಕ್ಕಿನಲ್ಲಿರುವ ರಜೆಗಳನ್ನು ಉಪಯೋಗಿಸಿಕೊಂಡು ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊಣೆಗಾರಿಕೆ ಇಲ್ಲದಂತೆ ವಿದೇಶಕ್ಕೆ ಹೋಗಿಬರಲು ಅನುಮತಿ ನೀಡಿರುವುದನ್ನು ಅನುಸಮರ್ಥಿಸಿತು.
<table>
<tr><th>ಕ್ರ.<br>ಸಂ.</th><th>ಉದ್ಯೋಗಿಯ ಹೆಸರು, ಹುದ್ದೆ ಮತ್ತು ಕಾರ್ಯ ನಿರ್ವಹಿಸುತ್ತಿರುವ ಕಛೇರಿ/ವಿಭಾಗ</th><th>ರಜೆ ಅವಧಿ</th></tr>
<tr><td>1</td><td>ಡಾ. ಆರ್.ಜೆರ್ರಿ ಆರೋಕ್ಯಮೇರಿ<br>ಅಧೀಕ್ಷಕರು, ವಿವಿ ಲಲಿತ ಕಲೆಗಳ ಕಾಲೇಜು<br>ಮಾನಸಗಂಗೋತ್ರಿ, ಮೈಸೂರು</td><td>05-05-2022<br>ರಿಂದ<br>13-05-2022</td></tr>
<tr><td>2</td><td>ಶ್ರೀ ಮಂಜುನಾಥ್.ಎಸ್<br>ಪ್ರಥಮ ದರ್ಜೆ ಗುಮಾಸ್ತರು, ಆಡಳಿತ ಶಾಖೆ<br>ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು</td><td>01-07-2022<br>ರಿಂದ<br>05-07-2022</td></tr>
</table></td></tr>
<tr><td rowspan="2">ಸಾಮಾನ್ಯ ಸಭೆ<br>2022/6.14</td><td>ಕಾನೂನು ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಕ ಮಾಡುವ ಬಗ್ಗೆ.</td></tr>
<tr><td>ಪ್ರೊ. ರಮೇಶ್, ಪ್ರಾಧ್ಯಾಪಕರು, ಕಾನೂನು ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ದಿನಾಂಕ: 02-11-2020 ರಿಂದ ಜಾರಿಗೆ ಬಂದಂತೆ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದ್ದು, ಇವರ ಅವಧಿಯು ದಿನಾಂಕ: 31-10-2022 ಕ್ಕೆ ಮುಕ್ತಾಯಗೊಳ್ಳುತ್ತಿದೆ ಹಾಗೂ ಕಾನೂನು ಅಧ್ಯಯನ ವಿಭಾಗದ ಪ್ರಾಧ್ಯಾಪಕರುಗಳ ಜೇಷ್ಠತೆಗನುಸಾರವಾಗಿ ಸರದಿಯ ಮೇಲೆ ಪ್ರೊ. ಟಿ.ಆರ್.ಮಾರುತಿ ಅವರು ಹಿರಿಯರಾಗಿರುತ್ತಾರೆ.</td></tr>
</table>

| | |
|---|---|
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000. ಪ್ರಕರಣ 34(7)ರ ಪ್ರಕಾರ ಪ್ರೊ. ಟಿ.ಆರ್.ಮಾರುತಿ, ಕಾನೂನು ಅಧ್ಯಯನ ವಿಭಾಗ. ಮಾನಸಗಂಗೋತ್ರಿ. ಮೈಸೂರು ಇವರನ್ನು ದಿನಾಂಕ: 02-11-2022 ರಿಂದ ಜಾರಿಗೆ ಬಂದಂತೆ ಎರಡು ವರ್ಷಗಳ ಅವಧಿಗೆ ಅಥವಾ ನಿವೃತ್ತಿಯ ದಿನಾಂಕದವರೆಗೆ ಅಥವಾ ಮುಂದಿನ ಆದೇಶದವರೆಗೆ. ಇವುಗಳಲ್ಲಿ ಯಾವುದು ಮೊದಲು ಘಟಿಸುವುದೋ. ಅಲ್ಲಿಯವರೆಗೆ ಕಾನೂನು ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡಲು ತೀರ್ಮಾನಿಸಲಾಯಿತು. |
| ಸಾಮಾನ್ಯ ಸಭೆ 2022/6.15 | ಉನ್ನತ ಶಿಕ್ಷಣ ಇಲಾಖೆಯು ವಿಶ್ವವಿದ್ಯಾನಿಲಯಗಳಲ್ಲಿನ ಬೋಧಕ ಹುದ್ದೆಗಳನ್ನು ಭರ್ತಿ ಮಾಡಲು ಮತ್ತು ಬೋಧಕರ ಪದೋನ್ನತಿಗಳ ಸಂಬಂಧ ಮಾದರಿ ಪರಿನಿಯಮಾವಳಿಯನ್ನು ರಚಿಸಿರುವ ಬಗ್ಗೆ. |
| ತೀರ್ಮಾನ | ಉನ್ನತ ಶಿಕ್ಷಣ ಇಲಾಖೆಯ ನಿರ್ದೇಶನದಂತೆ ವಿಶ್ವವಿದ್ಯಾನಿಲಯಗಳಲ್ಲಿನ ಬೋಧಕ ಹುದ್ದೆಗಳ ಭರ್ತಿ ಮತ್ತು ಪದೋನ್ನತಿಗಳ ಸಂಬಂಧದ ಮಾದರಿ ಪರಿನಿಯಮಾವಳಿಯ ಪುಟ ಸಂಖ್ಯೆ 10 ರಲ್ಲಿನ 4.1 (I) B ನಲ್ಲಿ ಈ ಕೆಳಕಂಡ ಅಂಶವನ್ನು ತೆಗೆದುಹಾಕಿ ಸರ್ಕಾರಕ್ಕೆ ಅನುಮೋದನೆಗಾಗಿ ಕಳುಹಿಸುವ ಕುರಿತು ಸಭೆಯು ಶಿಫಾರಸ್ಸು ಮಾಡಲು ತೀರ್ಮಾನಿಸಲಾಯಿತು.<br>"The Academic score as specified in the score card developed by the University shall be considered for short-listing of the candidates for interview only, and the selections shall be based on the performance in the interview". |
| ಸಾಮಾನ್ಯ ಸಭೆ 2022/6.16 | ಶ್ರೀಮತಿ ನಾಗಮ್ಮ, ತಾತ್ಕಾಲಿಕ ನಿಲಯ ಸಹಾಯಕರು. ಮಹಾರಾಜ ದೈಹಿಕ ಶಿಕ್ಷಣ ಕಾಲೇಜು. ಮಹಿಳಾ ವಿದ್ಯಾರ್ಥಿನಿಲಯ, ಮೈಸೂರು ಇವರ ಬದಲಿಗೆ ಅವರ ಮಗಳಿಗೆ ಕೆಲಸವನ್ನು ನೀಡುವಂತೆ ಕೋರಿರುವ ಬಗ್ಗೆ. |
| ತೀರ್ಮಾನ | ಶ್ರೀಮತಿ ನಾಗಮ್ಮ, ತಾತ್ಕಾಲಿಕ ನಿಲಯ ಸಹಾಯಕರು. ಮಹಾರಾಜ ದೈಹಿಕ ಶಿಕ್ಷಣ ಕಾಲೇಜು. ಮಹಿಳಾ ವಿದ್ಯಾರ್ಥಿನಿಲಯ. ಮೈಸೂರು ಇವರು ಬ್ರೇನ್ ಟ್ಯೂಮರ್‌ನಿಂದ ಬಳಲುತ್ತಿರುವುದರಿಂದ ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ. ಇವರ ಮಗಳಿಗೆ ತಾತ್ಕಾಲಿಕವಾಗಿ ಕೆಲಸವನ್ನು ನೀಡಲು ಸಭೆಯು ಒಪ್ಪಿಗೆ ಸೂಚಿಸಿತು. |
| ಸಾಮಾನ್ಯ ಸಭೆ 2022/6.17 | B.Des. (Hons.) Architectural Design Construction) B.Des. (Hons.) Interaction and Experience Design) B.Des. (Hons.) (Structural Civil Design) ಅಧ್ಯಯನ ಮಂಡಳಿಯನ್ನು ರಚಿಸಿರುವ ಬಗ್ಗೆ-ಅನುಸಮರ್ಥನೆಗಾಗಿ. |
| ತೀರ್ಮಾನ | Specialiazation Programme ನ B.Des. (Hons.) Architectural Design Construction) B.Des. (Hons.) Interaction and Experience Design) B.Des. (Hons.) (Structural Civil Design) ಕೋರ್ಸುಗಳಿಗೆ ಅಧ್ಯಯನ ಮಂಡಳಿಗಳನ್ನು ರಚಿಸಿ ಅಧಿಸೂಚನೆಯನ್ನು ಹೊರಡಿಸಿರುವ ವಿಶ್ವವಿದ್ಯಾನಿಲಯದ ಕ್ರಮವನ್ನು ಸಿಂಡಿಕೇಟ್ ಸಭೆಯು ಗಮನಿಸಿ ಅನುಸಮರ್ಥಿಸಿತು. |

| | |
|---|---|
| ಸಾಮಾನ್ಯ ಸಭೆ 2022/6.18 | ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಂಪೂರ್ಣ ಸ್ಥಿರ. ಚರ ಸ್ವತ್ತುಗಳ ರಕ್ಷಣೆ ಸಂಬಂಧ ಹೊರಗುತ್ತಿಗೆ ಆಧಾರದ ಮೇಲೆ ಭದ್ರತಾ ಸಂಸ್ಥೆಯನ್ನು ನೇಮಿಸುವ ಬಗ್ಗೆ- ಅನುಸಮರ್ಥನೆಗಾಗಿ. |
| | ಡಾ. ಚೈತ್ರ ನಾರಾಯಣ ಅವರು ಮಾತನಾಡಿ, ಹೊರಗುತ್ತಿಗೆ ಆಧಾರದ ಮೇಲೆ ಭದ್ರತಾ ಸಂಸ್ಥೆಯನ್ನು ವಿಶ್ವವಿದ್ಯಾನಿಲಯವು ಮೊದಲಿನಿಂದಲೂ ಮೆ: ಶ್ರೀ ರಂಗನಾಥ ಎಂಟರ್‌ಪ್ರೈಸಸ್, ಮೈಸೂರು ಇವರಿಗೆ ಕಾರ್ಯಾದೇಶ ನೀಡುತ್ತಿರುವುದು ಕಂಡು ಬಂದಿದೆ. ಈ ಸಂಬಂಧ 15 ದಿನಗಳ ಹಿಂದೆ ಮೆ: ಶ್ರೀ ರಂಗನಾಥ ಎಂಟರ್‌ಪ್ರೈಸಸ್, ಮೈಸೂರು ಇವರ ಟೆಂಡರ್ ರದ್ದುಗೊಳಿಸಬೇಕೆಂದು ಪತ್ರವನ್ನು ಬರೆಯಲಾಗಿತ್ತು. ಸೆಕ್ಯೂರಿಟಿ ಗಾರ್ಡ್‌ಗಳಿಗೆ weekly half ವೇತನ ನೀಡುತ್ತಿದ್ದಾರೆ. ಇದರೊಂದಿಗೆ ತಿಂಗಳ ವೇತನವು ಕಡಿಮೆಯಿರುತ್ತದೆ. ಇದುವರೆವಿಗೂ ವೇತನ ಪರಿಷ್ಕರಿಸಿರುವುದಿಲ್ಲ ಹಾಗೂ ನಿಯಮಾನುಸಾರ ಒದಗಿಸಬೇಕಾದ ಪಿಎಫ್. ಇಎಸ್‌ಐ & ಇತರೆ ಸೌಲಭ್ಯಗಳನ್ನು ನೀಡಿರುವುದಿಲ್ಲ. ಈ ಸಂಬಂಧ ವಿಶ್ವವಿದ್ಯಾನಿಲಯಕ್ಕೆ ದಾಖಲೆಗಳನ್ನು ಸಲ್ಲಿಸುತ್ತೇನೆ. ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಸೆಕ್ಯೂರಿಟಿ ಗಾರ್ಡ್‌ಗಳ ಸಂಖ್ಯೆ, ಅವರಗಳು ವೇತನ ಮತ್ತು ಇತರೆ ಸೌಲಭ್ಯದ ಬಗ್ಗೆ ಹಾಗೂ ವಿಶ್ವವಿದ್ಯಾನಿಲಯವು ವಿಧಿಸಿರುವ ನಿಬಂಧನೆ ಮತ್ತು ಷರತ್ತುಗಳ ಪೂರ್ಣ ಮಾಹಿತಿ ಸಲ್ಲಿಸಿದ ನಂತರ ಸಭೆಯು ಅನುಸಮರ್ಥಿಸಬೇಕು. ಇಲ್ಲದಿದ್ದರೆ ಈ ಸಭೆಯಲ್ಲಿ ಅನುಸಮರ್ಥಿಸುವುದಕ್ಕೆ ನನ್ನ ಆಕ್ಷೇಪಣೆಯಿರುತ್ತದೆಂದು ತಿಳಿಸಿದರು.<br><br>ಮುಂದುವರೆದು ಮಾತನಾಡಿ, ಯಾವುದೇ ಸಂಸ್ಥೆಯನ್ನು ಟೆಂಡರ್‌ನಲ್ಲಿ ಅಂಗೀಕರಿಸಿ ವಿಶ್ವವಿದ್ಯಾನಿಲಯವು ಕಾರ್ಯಾದೇಶ ನೀಡುವ ಮೊದಲು ವಿಷಯವನ್ನು ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿ, ಅನುಮೋದನೆ ಪಡೆಯಬೇಕು. ಇದರ ಬದಲು ಕಾರ್ಯಾದೇಶ ನೀಡಿದ ನಂತರ ಅನುಸಮರ್ಥನೆಗಾಗಿ ವಿಷಯವನ್ನು ಮಂಡಿಸುವುದು ಸೂಕ್ತವಲ್ಲವೆಂದು ತಿಳಿಸಿದರು. ಈ ಪ್ರಸ್ತಾವನೆಯನ್ನು ಶ್ರೀ ಎಂ.ಬಿ. ಗಪ್ಪಣ್ಣ ಅವರು ಬೆಂಬಲಿಸಿದರು.<br><br>ಈ ಸಂಬಂಧ ಮಾನ್ಯ ಕುಲಪತಿಗಳು ಮಾತನಾಡಿ, ಮೆ: ಶ್ರೀ ರಂಗನಾಥ ಎಂಟರ್‌ಪ್ರೈಸಸ್, ಮೈಸೂರು ಇವರಿಗೆ ಮೊದಲಿನಿಂದಲೂ ಟೆಂಡರ್ ಕಾರ್ಯಾದೇಶ ನೀಡಿರುವುದಿಲ್ಲವೆಂದು ಹಾಗೂ ಪ್ರಸ್ತುತವಿರುವ ಭದ್ರತಾ ಸಿಬ್ಬಂದಿಗಳರವರುಗಳನ್ನೆ ಮುಂದುವರೆಸಲಾಗಿದೆ. ಏಜೆನ್ಸಿ ಮಾತ್ರ ಬದಲಾವಣೆಯಾಗಿರುತ್ತದೆಂದು ಸ್ಪಷ್ಟೀಕರಣ ನೀಡುತ್ತಾ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಒಟ್ಟು 175 ಮಂದಿ ಭದ್ರತಾ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದು, 24 ಗಂಟೆಗಳಿಗೆ ತಲಾ 8 ಗಂಟೆಗೆ 60 ಮಂದಿ ಮೂರು ಪಾಳಿಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ವಿಶ್ವವಿದ್ಯಾನಿಲಯದ ಹಿತದೃಷ್ಟಿಯಿಂದ ಮೆ: ಶ್ರೀ ರಂಗನಾಥ ಎಂಟರ್‌ಪ್ರೈಸಸ್, ಮೈಸೂರು ಇವರಿಗೆ ನೀಡಲಾಗಿರುವ ಕಾರ್ಯಾದೇಶಕ್ಕೆ ಸಭೆಯಲ್ಲಿ ಅನುಸಮರ್ಥನೆ ನೀಡಿ, ವಿಶ್ವವಿದ್ಯಾನಿಲಯವು ವಿಧಿಸಿರುವ ನಿಬಂಧನೆ ಮತ್ತು ಷರತ್ತುಗಳ ಪೂರ್ಣ ಮಾಹಿತಿ ಸಲ್ಲಿಸಲಾಗುವುದು. ಒಂದು ವೇಳೆ ಮೆ: ಶ್ರೀ ರಂಗನಾಥ ಎಂಟರ್‌ಪ್ರೈಸಸ್, ಮೈಸೂರು ಇವರು ವಿಶ್ವವಿದ್ಯಾನಿಲಯವು ವಿಧಿಸಿರುವ ನಿಬಂಧನೆ ಮತ್ತು ಷರತ್ತುಗಳನ್ನು ಪಾಲಿಸದೇ ಇರುವುದು ಕಂಡು ಬಂದಲ್ಲಿ, ಸಿಂಡಿಕೇಟ್ ಸಭೆಯಲ್ಲಿಯೇ ಸದರಿಯವರ ಕಾರ್ಯಾದೇಶವನ್ನು ಹಿಂಪಡೆಯಲು ತೀರ್ಮಾನ ತೆಗೆದುಕೊಳ್ಳಲಾಗುವುದೆಂದು ತಿಳಿಸಿದರು. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಂಪೂರ್ಣ ಸ್ಥಿರ. ಚರ ಸ್ವತ್ತುಗಳ ರಕ್ಷಣೆ ಸಂಬಂಧ M/s Sri Ranganatha Enterprises, Mysuru ಭದ್ರತಾ ಸಂಸ್ಥೆಯ ಟೆಂಡರ್‌ನ್ನು ಅಂಗೀಕರಿಸಿ, ಎರಡು ವರ್ಷಗಳ ಅವಧಿಗೆ ಅಥವಾ ವಿಶ್ವವಿದ್ಯಾನಿಲಯದ ಮುಂದಿನ |

| | |
|---|---|
| | ಆದೇಶದವರೆಗೆ ಹೊರಗುತ್ತಿಗೆ ಆಧಾರದ ಮೇಲೆ ವಿಶ್ವವಿದ್ಯಾನಿಲಯ ವಿಧಿಸಿರುವ ನಿಬಂಧನೆ ಮತ್ತು ಷರತ್ತುಗಳನ್ವಯ ಕಾರ್ಯಾದೇಶ ನೀಡಿ ಒಡಂಬಡಿಕೆ ಮಾಡಿಕೊಂಡಿರುವುದನ್ನು ಸಭೆಯು ಅನುಸಮರ್ಥಿಸಿತು. ಈ ಸಂಬಂಧದ ದಾಖಲೆಗಳನ್ನು ಸಿಂಡಿಕೇಟ್ ಸದಸ್ಯರು ಪರಿಶೀಲಿಸಲು ಇಚ್ಛಿಸಿದ್ದಲ್ಲಿ ಒದಗಿಸಲು ತಿಳಿಸಲಾಯಿತು. |
| ಸಾಮಾನ್ಯ ಸಭೆ 2022/6.19 | ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಸ್ಥಾಪಿಸಲಾಗಿರುವ "ಕುವೆಂಪು ಕಾವ್ಯಾಧ್ಯಾಯನ ಪೀಠ"ಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ಮುಂದಿನ ಒಂದು ವರ್ಷದ ಅವಧಿಗೆ ಆಹ್ವಾನಿಸುವ ಬಗ್ಗೆ. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಸ್ಥಾಪಿಸಲಾಗಿರುವ "ಕುವೆಂಪು ಕಾವ್ಯಾಧ್ಯಾಯನ ಪೀಠ"ಕ್ಕೆ ಸಂದರ್ಶಕ ಪ್ರಾಧ್ಯಾಪಕರನ್ನು ಮಾನ್ಯ ಕುಲಪತಿಯವರ ವಿವೇಚಾನುಸಾರ ಮುಂದಿನ ಒಂದು ವರ್ಷದ ಅವಧಿಗೆ ನೇಮಕ ಮಾಡಲು ಸಭೆಯಲ್ಲಿ ತೀರ್ಮಾನಿಸಲಾಯಿತು. |
| ಸಾಮಾನ್ಯ ಸಭೆ 2022/6.20 | ಯುಜಿಸಿ ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರದಲ್ಲಿ ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿರುವ ಡಾ. ಎಲ್. ನಂಜುಂಡಸ್ವಾಮಿಯವರನ್ನು ಖಾಯಂಗೊಳಿಸುವ ಬಗ್ಗೆ ಪರಿನಿಯಮಾವಳಿಯನ್ನು ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸುವ ಸಂಬಂಧ ರಚಿಸಲಾಗಿರುವ ಸಮಿತಿಯ ಸಭೆಯ ವರದಿ. |
| | ಪ್ರೊ. ಜಿ.ವೆಂಕಟೇಶ್‌ಕುಮಾರ್ ಅವರು ಮಾತನಾಡಿ, ಈ ಹಿಂದೆ ಯುಜಿಸಿ-ಶೈಕ್ಷಣಿಕ ಸಿಬ್ಬಂದಿ ಮಹಾವಿದ್ಯಾಲಯವನ್ನು ಯುಜಿಸಿ, ನವದೆಹಲಿಯು ಯುಜಿಸಿ-ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರವೆಂದು ಮರು ನಾಮಕರಣ ಮಾಡಲಾಗಿರುತ್ತದೆ. ವಿಶ್ವವಿದ್ಯಾನಿಲಯವು ಡಾ. ಎಲ್. ನಂಜುಂಡಸ್ವಾಮಿಯವರನ್ನು ಖಾಯಂಗೊಳಿಸುವ ಬಗ್ಗೆ ಪ್ರತ್ಯೇಕ ಪರಿನಿಯಮಾವಳಿಯನ್ನು ಸಿದ್ಧಪಡಿಸಿ ಸರ್ಕಾರಕ್ಕೆ ಕಳುಹಿಸುವ ಬದಲು ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಶೈಕ್ಷಣಿಕ ಮತ್ತು ಆಡಳಿತ ಸಿಬ್ಬಂದಿಗಳನ್ನು ಖಾಯಂಗೊಳಿಸುವ ಬಗ್ಗೆ ಪರಿನಿಯಮಾವಳಿಯನ್ನು ಸಿದ್ಧಪಡಿಸಿ ಸರ್ಕಾರಕ್ಕೆ ಕಳುಹಿಸಬೇಕು ಹಾಗೂ ಪ್ರಸ್ತುತ ಕೇಂದ್ರವು ಸ್ಥಾಪನೆಯಾದಗಿಂದ ಈವರೆವಿಗೂ ಯುಜಿಸಿ ಅನುದಾನ ಸಂಸ್ಥೆಯಿಂದ ಸದರಿ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಶೈಕ್ಷಣಿಕ ಮತ್ತು ಆಡಳಿತ ಸಿಬ್ಬಂದಿಗಳ ವೇತನ ಹಾಗೂ ಇನ್ನಿತರ ಕಾರ್ಯಕ್ರಮಗಳ ವೆಚ್ಚಗಳಿಗೆ ಅನುದಾನ ಬಿಡುಗಡೆ ಮಾಡುತ್ತಿದೆ. ಆದ್ದರಿಂದ ಯುಜಿಸಿ ಅನುದಾನದಡಿಯಲ್ಲಿ ನಿರ್ವಹಿಸುತ್ತಿರುವ ಮತ್ತೊಂದು ಕೇಂದ್ರವಾದ CSSEIP ನಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಸಿಬ್ಬಂದಿಗಳಿಗೆ ಅಧಿನಿಯಮವನ್ನು ರಚಿಸಿ ಸರ್ಕಾರಕ್ಕೆ ಕಳುಹಿಸಿರುವಂತೆ ಯುಜಿಸಿ-ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಶೈಕ್ಷಣಿಕ ಮತ್ತು ಆಡಳಿತ ಸಿಬ್ಬಂದಿಗಳಿಗೂ ಅನ್ವಯಿಸುವಂತೆ ಪರಿನಿಯಮಾವಳಿಯನ್ನು ರಚಿಸಬೇಕೆಂದು ಸಭೆಯಲ್ಲಿ ಆಗ್ರಹಿಸಿದರು. ಈ ಪ್ರಸ್ತಾವನೆಗೆ ಡಾ. ಈ.ಸಿ. ನಿಂಗರಾಜ್ ಗೌಡ, ಡಾ. ಚೈತ್ರ ನಾರಾಯಣ, ಶ್ರೀ ಎಂ.ಬಿ.ಗಪ್ಪಣ್ಣ, ಶ್ರೀ ಎಸ್.ಡಿ.ದೊಡ್ಡಚಾರಿ ಹಾಗೂ ಡಾ. ಎಂ.ಎಸ್.ದಾಮೋದರ ಅವರುಗಳು ಬೆಂಬಲ ಸೂಚಿಸುತ್ತಾ, ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಸಿಬ್ಬಂದಿಗಳಿಗೂ ಯುಜಿಸಿಯವರು ಅನುದಾನ ಬಿಡುಗಡೆಗೊಳಿಸುತ್ತಿರುವುದರಿಂದ ಎಲ್ಲಾ ಸಿಬ್ಬಂದಿಗಳಿಗೂ ಅನ್ವಯಿಸುವಂತೆ ಪರಿನಿಯಮಾವಳಿಯನ್ನು ರಚಿಸಿ ನಿಯತಗೊಳಿಸಬಹುದೆಂದು ತಿಳಿಸಿದರು.<br><br>ಮಾನ್ಯ ಕುಲಪತಿಯವರು ಮಾತನಾಡಿ, ಪ್ರಸ್ತುತ ಡಾ.ಎಲ್. ನಂಜುಂಡಸ್ವಾಮಿಯವರನ್ನು ಖಾಯಂಗೊಳಿಸುವ ಬಗ್ಗೆ ಸಿದ್ಧಪಡಿಸಿರುವ ಪ್ರತ್ಯೇಕ ಪರಿನಿಯಮಾವಳಿಯನ್ನು ಸರ್ಕಾರಕ್ಕೆ ಸಲ್ಲಿಸುವುದು. ಹಾಗೆಯೇ, ಯುಜಿಸಿ-ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಆಡಳಿತ ಸಿಬ್ಬಂದಿಯವರುಗಳಿಗೂ ಪ್ರತ್ಯೇಕ ಪರಿನಿಯಮಾವಳಿಯನ್ನು |

| | |
|---|---|
| | ಸಿದ್ಧಪಡಿಸಿ ಸರ್ಕಾರದ ಅನುಮೋದನೆಗಾಗಿ ಕಳುಹಿಸಲಾಗುವುದೆಂದು ಸಭೆಯಲ್ಲಿ ತೀರ್ಮಾನಿಸಿದರು. ಇದಕ್ಕೆ ಸಭೆಯು ಒಪ್ಪಿಗೆಯನ್ನು ಸೂಚಿಸಿತು. |
| ತೀರ್ಮಾನ | ವಿಶ್ವವಿದ್ಯಾನಿಲಯದ ವತಿಯಿಂದ ರಚಿಸಿರುವ ಸಮಿತಿಯ ವರದಿಯನ್ವಯ. ಯುಜಿಸಿ ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರದಲ್ಲಿ ತಾತ್ಕಾಲಿಕ ಸಹಾಯಕ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿರುವ ಡಾ. ಎಲ್. ನಂಜುಂಡಸ್ವಾಮಿಯವರನ್ನು ಖಾಯಂಗೊಳಿಸುವ ಬಗ್ಗೆ ಸಿದ್ಧಪಡಿಸಿರುವ ಪರಿನಿಯಮಾವಳಿಯನ್ನು ಸರ್ಕಾರಕ್ಕೆ ಕಳುಹಿಸಲು ಸಭೆಯಲ್ಲಿ ಶಿಫಾರಸ್ಸು ಮಾಡಲಾಯಿತು. |
| ಸಾಮಾನ್ಯ ಸಭೆ 2022/6.21 | ದೂರ ಶಿಕ್ಷಣದ ಕಾರ್ಯಕ್ರಮದ ಸ್ನಾತಕ ಪದವಿಯ ಕೋರ್ಸುಗಳಿಗೆ III, IV, V, VI ಮತ್ತು ಸ್ನಾತಕೋತ್ತರ ಪದವಿಯ ಕೋರ್ಸುಗಳಿಗೆ III ಮತ್ತು IV ಚಾತುರ್ಮಾಸದ ಪಠ್ಯಗಳನ್ನು ರಚಿಸಿರುವ ಅಧ್ಯಾಪಕರುಗಳಿಗೆ ಗೌರವಧನ ನೀಡುವ ಸಂಬಂಧ ಸಿದ್ಧಪಡಿಸಲಾದ ಅಧ್ಯಾಪಕರುಗಳ ಪಟ್ಟಿಗಳಿಗೆ ಅನುಮೋದನೆ ಪಡೆಯುವ ಬಗ್ಗೆ. |
| ತೀರ್ಮಾನ | ದೂರ ಶಿಕ್ಷಣದ ಕಾರ್ಯಕ್ರಮದ ಸ್ನಾತಕ ಪದವಿಯ ಕೋರ್ಸುಗಳಿಗೆ III, IV, V, VI ಮತ್ತು ಸ್ನಾತಕೋತ್ತರ ಪದವಿಯ ಕೋರ್ಸುಗಳಿಗೆ III ಮತ್ತು IV ಚಾತುರ್ಮಾಸದ ಪಠ್ಯಗಳನ್ನು ರಚಿಸಿರುವ ಅಧ್ಯಾಪಕರುಗಳಿಗೆ ಗೌರವಧನ ನೀಡುವ ಸಂಬಂಧ ಸಿದ್ಧಪಡಿಸಲಾದ ಅಧ್ಯಾಪಕರುಗಳ ಪಟ್ಟಿಗಳನ್ನು ಅನುಮೋದಿಸಿತು. |
| ಸಾಮಾನ್ಯ ಸಭೆ 2022/6.22 | ದಿನಾಂಕ : 05-07-2022ರಂದು ಮಾನ್ಯ ಕುಲಪತಿಯವರ ಅಧ್ಯಕ್ಷತೆಯಲ್ಲಿ ನಡೆದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿಶೇಷ ಘಟಕದ ಸ್ಥಾಯಿ ಸಮಿತಿ ಸಭೆಯ ಶಿಫಾರಸ್ಸನ್ನು ಪರಿಗಣಿಸುವ ಬಗೆಗೆ. |
| ತೀರ್ಮಾನ | ದಿನಾಂಕ : 05-07-2022ರಂದು ಮಾನ್ಯ ಕುಲಪತಿಯವರ ಅಧ್ಯಕ್ಷತೆಯಲ್ಲಿ ನಡೆದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿಶೇಷ ಘಟಕದ ಸ್ಥಾಯಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು. |
| ಸಾಮಾನ್ಯ ಸಭೆ 2022/6.23 | ಡಾ. ಜಿ. ಸುಬ್ರಹ್ಮಣ್ಯ, ನಿವೃತ್ತ ಪ್ರಾಧ್ಯಾಪಕರು ಇವರನ್ನು ಸಂದರ್ಶಕ ಪ್ರಾಧ್ಯಾಪಕರಾಗಿ ಆಹ್ವಾನಿಸುವ ಬಗ್ಗೆ. |
| ತೀರ್ಮಾನ | ಡಾ. ಜಿ.ಸುಬ್ರಹ್ಮಣ್ಯ, ನಿವೃತ್ತ ಪ್ರಾಧ್ಯಾಪಕರು ಇವರನ್ನು ದಿನಾಂಕ: 10-08-2022 ರಿಂದ ಜಾರಿಗೆ ಬಂದಂತೆ ರೂ.25,000/-ಗಳ ಗೌರವಧನವನ್ನು ನಿಗದಿಪಡಿಸಿ. ಒಂದು ವರ್ಷದ ಅವಧಿಗೆ ಜೆನಿಟಿಕ್ಸ್ ಮತ್ತು ಜಿನೋಮಿಕ್ಸ್ ಅಧ್ಯಯನ ವಿಭಾಗ. ಮಾನಸಗಂಗೋತ್ರಿ. ಮೈಸೂರು ಇಲ್ಲಿಗೆ ಸಂದರ್ಶಕ ಪ್ರಾಧ್ಯಾಪಕರನ್ನಾಗಿ ಆಹ್ವಾನಿಸಿರುವ ವಿಶ್ವವಿದ್ಯಾನಿಲಯದ ಕ್ರಮವನ್ನು ಸಭೆಯು ಅನುಸಮರ್ಥಿಸಿತು. |
| ಸಾಮಾನ್ಯ ಸಭೆ 2022/6.24 | ಎಸ್.ಎಸ್. ಪಾಟೀಲ್ ರೀಸರ್ಚ್ ಫೌಂಡೇಷನ್. ಹಿರೇಕೆರೂರು ಇವರ ಸಂಸ್ಥೆಯಲ್ಲಿ Commerce ವಿಷಯದಲ್ಲಿ ಹೊಸದಾಗಿ ಸಂಶೋಧನಾ ಕಾರ್ಯ ಕೈಗೊಳ್ಳಲು ವಿಶ್ವವಿದ್ಯಾನಿಲಯದ ಮಾನ್ಯತೆ ಕೋರಿದ್ದ ಸಂಬಂಧ ವಿಶ್ವವಿದ್ಯಾನಿಲಯದ ಪರಿವೀಕ್ಷಣಾ ಸಮಿತಿಯು ಸಲ್ಲಿಸಿರುವ ವರದಿಗೆ ಅನುಮೋದನೆ ಕೋರುವ ಬಗ್ಗೆ. |
| ತೀರ್ಮಾನ | ಪರಿವೀಕ್ಷಣಾ ಸಮಿತಿಯ ಶಿಫಾರಸ್ಸಿನನ್ವಯ ಮತ್ತು "The University of Mysore-Recognition of Certain institutions for specified studies/specialized and Research Studies 2008" ಅಧಿನಿಯಮದಲ್ಲಿರುವ ಅವಕಾಶದನುಸಾರ ಎಸ್.ಎಸ್. ಪಾಟೀಲ್ ರೀಸರ್ಚ್ ಫೌಂಡೇಷನ್. ಸ್ನಾತಕೋತ್ತರ ವಿಭಾಗ. ಬಿ.ಆರ್.ತಂಬಾಕದ ಕಲಾ. ವಾಣಿಜ್ಯ ಮತ್ತು ವಿಜ್ಞಾನ ಪ್ರಥಮ ದರ್ಜೆ ಕಾಲೇಜು. ಹಿರೇಕೆರೂರು ಸಂಸ್ಥೆಗೆ ವಿಷಯದಲ್ಲಿ ಸಂಶೋಧನಾ ಕಾರ್ಯ ಕೈಗೊಳ್ಳಲು ಮಾನ್ಯತೆ ನೀಡಲು ತೀರ್ಮಾನಿಸಲಾಯಿತು. |

| | |
|---|---|
| ಸಾಮಾನ್ಯ ಸಭೆ 2022/6.25 | ಪ್ರೊ. ಆರ್. ರಾಜಣ್ಣ ಮತ್ತು ಪ್ರೊ. ಶೋಭಾ ಜಗನ್ನಾಥ್. ನಿವೃತ್ತ ಪ್ರಾಧ್ಯಾಪಕರುಗಳು ಇವರುಗಳು ವಯೋನಿವೃತ್ತಿ ನಂತರ ಕರ್ನಾಟಕ ರಾಜ್ಯ ಉಚ್ಛ ನ್ಯಾಯಾಲಯದ ಆದೇಶದ ರೀತ್ಯಾ ಸೇವೆಯಲ್ಲಿ ಮುಂದುವರೆದಿರುವ ಸಂಬಂಧ ಅವರುಗಳನ್ನು 2021-22ನೇ ಶೈಕ್ಷಣಿಕ ವರ್ಷದವರೆಗೂ ಮುಂದುವರೆಸಲು ಮತ್ತು ಪೂರ್ಣ ಪ್ರಮಾಣದ ವೇತನವನ್ನು ನೀಡುವಂತೆ ಕೋರಿರುವ ಬಗ್ಗೆ. |
| ತೀರ್ಮಾನ | ಪ್ರೊ. ಆರ್. ರಾಜಣ್ಣ ಮತ್ತು ಪ್ರೊ. ಶೋಭಾ ಜಗನ್ನಾಥ್. ನಿವೃತ್ತ ಪ್ರಾಧ್ಯಾಪಕರುಗಳು ಇವರುಗಳು ವಯೋನಿವೃತ್ತಿ ನಂತರ ಕರ್ನಾಟಕ ರಾಜ್ಯ ಉಚ್ಛ ನ್ಯಾಯಾಲಯದ ಆದೇಶದ ರೀತ್ಯಾ ಸೇವೆಯಲ್ಲಿ ಮುಂದುವರೆದಿರುವ ಸಂಬಂಧ ಅವರುಗಳನ್ನು 2021-22ನೇ ಶೈಕ್ಷಣಿಕ ವರ್ಷದವರೆಗೂ ಮುಂದುವರೆಸಲು ಮತ್ತು ಪೂರ್ಣ ಪ್ರಮಾಣದ ವೇತನವನ್ನು ನೀಡುವಂತೆ ಕೋರಿರುವುದನ್ನು ಕೂಲಂಕಷವಾಗಿ ಪರಾಮರ್ಶಿಸಿದ ಸಭೆಯು **ವಿಶ್ವವಿದ್ಯಾನಿಲಯದ ಅಧಿನಿಯಮ Conditions of Service 1984ರ clause (3)ರನ್ವಯ** ಕ್ರಮ ತೆಗೆದುಕೊಳ್ಳಲು ತೀರ್ಮಾನಿಸಲಾಯಿತು. |
| ಸಾಮಾನ್ಯ ಸಭೆ 2022/6.26 | ಪ್ರಶ್ನೆಪತ್ರಿಕೆ ಮುದ್ರಣ ಕಾರ್ಯದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ 1999ರ 4(ಜಿ) ಅಡಿಯಲ್ಲಿ ವಿನಾಯಿತಿಗೆ ಸಂಬಂಧಿಸಿದಂತೆ. |
| ತೀರ್ಮಾನ | ಪ್ರಶ್ನೆಪತ್ರಿಕೆ ಮುದ್ರಣ ಕಾರ್ಯದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ 1999ರ 4(ಜಿ) ಅಡಿಯಲ್ಲಿ ವಿನಾಯಿತಿಗೆ ಸಂಬಂಧಿಸಿದಂತೆ ಸರ್ಕಾರದ ಅನುಮತಿಯನ್ನು ನಿರೀಕ್ಷಿಸಿ 4(ಜಿ) ಅಡಿಯಲ್ಲಿ ಈ ಹಿಂದೆ ನೀಡಿರುವ ವಿನಾಯಿತಿಯನ್ನು ಯಥಾಸ್ಥಿತಿಯಲ್ಲೇ ಮುಂದುವರೆಸಲು ಸಭೆಯಲ್ಲಿ ತೀರ್ಮಾನಿಸಲಾಯಿತು. |
| ಸಾಮಾನ್ಯ ಸಭೆ 2022/6.27 | ಅತಿಥಿ ಉಪನ್ಯಾಸಕರುಗಳ ಸಂಭಾವನೆಯನ್ನು ಪರಿಷ್ಕರಿಸುವ ಬಗ್ಗೆ. |
| | ಶ್ರೀ ಆರ್.ಪ್ರದೀಪ್ ಕುಮಾರ್ ದೀಕ್ಷಿತ್ ಅವರು ಮಾತನಾಡಿ, ದಿನಾಂಕ:16.08.2022 ರಂದು ಜರುಗಿದ ಅತಿಥಿ ಉಪನ್ಯಾಸಕರ ಸಂಭಾವನೆಯನ್ನು ಪರಿಷ್ಕರಿಸುವ ಸಂಬಂಧ ನಡೆದ ಸಮಿತಿ ಸಭೆಯಲ್ಲಿ ಗಂಟೆಗೆ ರೂ.583/- ರಿಂದ ರೂ.700/-ಕ್ಕೆ ಪರಿಷ್ಕರಿಸಲಾಯಿತು. ಬೇರೆ ಬೇರೆ ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರುಗಳ ಸಂಭಾವನೆಯನ್ನು ಪರಿಶೀಲಿಸಿದಾಗ, ಗಂಟೆಗೆ ರೂ.700/- ರಿಂದ 781/-ಗಳಿಗೆ ಪರಿಷ್ಕರಿಸುವ ಮೂಲಕ ನ್ಯಾಯ ಒದಗಿಸಿದಂತಾಗುತ್ತದೆ. ಏಕೆಂದರೆ ತಾತ್ಕಾಲಿಕ ಅಧ್ಯಾಪಕೇತರ ಉದ್ಯೋಗಿಗಳಿಗೆ ವರ್ಷದಲ್ಲಿ ಎರಡು ದಿನ ಮಾತ್ರ ಬಿಡುಗಡೆ ಮಾಡಿ, ಮರು ನೇಮಕಾತಿ ಮಾಡಿಕೊಳ್ಳಲಾಗುತ್ತದೆ. ಆದರೆ, ಅತಿಥಿ ಉಪನ್ಯಾಸಕರುಗಳು ಶೈಕ್ಷಣಿಕ ವೇಳಾಪಟ್ಟಿಯನ್ನುಸಾರ ಕಾರ್ಯ ನಿರ್ವಹಿಸುತ್ತಿರುವುದರಿಂದ ವರ್ಷದ ಎಲ್ಲಾ ತಿಂಗಳುಗಳಿಗೂ ವೇತನ ಪಡೆಯುವಂತಿರುವುದಿಲ್ಲ. ಆದ್ದರಿಂದ, NET/SLET/Ph.D ವಿದ್ಯಾರ್ಹತೆಯನ್ನು ಹೊಂದಿರುವ ಅತಿಥಿ ಉಪನ್ಯಾಸಕರುಗಳಿಗೆ ಗಂಟೆಗೆ ರೂ.700/- ರಿಂದ 781/-ರೂ.ಗಳಿಗೆ ಪರಿಷ್ಕರಿಸಬೇಕೆಂದು ಕೋರಿದರು.<br><br>ಡಾ. ನಿಂಗರಾಜ್ ಗೌಡ ಅವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದ ಎಲ್ಲಾ ವಿಭಾಗ/ಕೇಂದ್ರ/ಸಂಸ್ಥೆ/ಕಾಲೇಜುಗಳಲ್ಲಿ ಪ್ರತಿ ವರ್ಷ ಖಾಯಂ ಅಧ್ಯಾಪಕರುಗಳು ವಯೋನಿವೃತ್ತಿ ಹೊಂದುತ್ತಿರುವುದರಿಂದ, ಹೆಚ್ಚಿನ ಮಟ್ಟದಲ್ಲಿ ಬೋಧನಾ ಹಾಗೂ ಪ್ರಾಯೋಗಿಕ ಕಾರ್ಯಭಾರವನ್ನು ಅತಿಥಿ ಉಪನ್ಯಾಸಕರುಗಳು ನಿರ್ವಹಿಸುತ್ತಿರುವುದರಿಂದ NET/SLET/Ph.D ವಿದ್ಯಾರ್ಹತೆಯನ್ನು ಹೊಂದಿರುವ ಅತಿಥಿ ಉಪನ್ಯಾಸಕರುಗಳಿಗೆ ಗಂಟೆಗೆ ರೂ.700/- ರಿಂದ 781/- ರೂ.ಗಳಿಗೆ ಪರಿಷ್ಕರಿಸಬೇಕೆಂದು ಅಭಿಪ್ರಾಯಿಸಿದರು. |

ಡಾ. ಎಂ.ಎಸ್.ದಾಮೋದರ ಅವರು ಮಾತನಾಡಿ. ಇತರೆ ವಿಶ್ವವಿದ್ಯಾನಿಲಯದಲ್ಲಿ ಅತಿಥಿ ಉಪನ್ಯಾಸಕರುಗಳ ಬೋಧನಾ ಕಾರ್ಯಭಾರ ಅವಧಿಯೊಂದಿಗೆ ಸಂಭಾವನೆಯು ಸಹ ಹೆಚ್ಚಾಗಿರುತ್ತದೆ. ಮೈಸೂರು ವಿಶ್ವವಿದ್ಯಾನಿಲಯವು ಮಾದರಿ ವಿಶ್ವವಿದ್ಯಾನಿಲಯವಾಗಿರುವುದರಿಂದ NET/SLET/Ph.D ವಿದ್ಯಾರ್ಹತೆಯನ್ನು ಹೊಂದಿರುವ ಅತಿಥಿ ಉಪನ್ಯಾಸಕರುಗಳಿಗೆ ಸಂಭಾವನೆಯನ್ನು ಗಂಟೆಗೆ ರೂ.700/- ರಿಂದ 781/-ರೂ.ಗಳಿಗೆ ಪರಿಷ್ಕರಿಸಬೇಕೆಂದು ಸಭೆಯಲ್ಲಿ ಆಗ್ರಹಿಸಿದರು.

ಶ್ರೀ ಎಸ್.ಡಿ.ದೊಡ್ಡಚಾರಿ ಅವರು ಮಾತನಾಡಿ, ವಿಶ್ವವಿದ್ಯಾನಿಲಯವು ಪ್ರತಿ ಮಾಹೆ ಅಧ್ಯಾಪಕರುಗಳಿಗೆ ನೀಡುವ ವೇತನಕ್ಕಿಂತ ಅಧ್ಯಾಪಕೇತರ ಉದ್ಯೋಗಿಗಳಿಗೆ ನೀಡುವ ವೇತನವು ಹೆಚ್ಚಾಗಿರುತ್ತದೆ. ಈ ಸಂಬಂಧ ಹಣಕಾಸು ಅಧಿಕಾರಿಯವರಿಗೆ ಹಲವಾರು ಬಾರಿ ತಿಳಿಸುವ ಮೂಲಕ ಆಕ್ಷೇಪಣೆ ವ್ಯಕ್ತಪಡಿಸಿರುತ್ತೇನೆಂದು ಸಭೆಯ ಗಮನಕ್ಕೆ ತಂದರು.

ಪ್ರೊ. ಜಿ.ವೆಂಕಟೇಶ್‌ಕುಮಾರ್ ಅವರು ಮಾತನಾಡಿ, ಇಂದಿನ ಪರಿಸ್ಥಿತಿಯಲ್ಲಿ ಸುಮಾರು ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರುಗಳಿಗೆ ಖಾಯಂ ನೇಮಕಾತಿ ಕಷ್ಟಕರವಾಗಿರುವುದರಿಂದ ಹಾಗೂ ಖಾಯಂ ಅಧ್ಯಾಪಕರು / ಅಧ್ಯಾಪಕೇತರರುಗಳಿಗೆ ಪ್ರತಿ ವರ್ಷ ವಾರ್ಷಿಕ ವೇತನ ಬಡ್ತಿ ಪಡೆಯುತ್ತೇವೆ. ಆದ್ದರಿಂದ NET/SLET/Ph.D ವಿದ್ಯಾರ್ಹತೆಯನ್ನು ಹೊಂದಿರುವ ಅತಿಥಿ ಉಪನ್ಯಾಸಕರುಗಳಿಗೆ ಗಂಟೆಗೆ ರೂ.700/- ರಿಂದ 781/-ರೂ.ಗಳಿಗೆ ಪರಿಷ್ಕರಿಸಬಹುದೆಂದು ತಿಳಿಸಿದರು.

ಹಣಕಾಸು ಅಧಿಕಾರಿಗಳು ಮಾತನಾಡಿ. ವಿಶ್ವವಿದ್ಯಾನಿಲಯದ ಪ್ರಸ್ತುತ ಆರ್ಥಿಕ ಪರಿಸ್ಥಿತಿಯಲ್ಲಿ ಈ ಹೊಣೆಗಾರಿಕೆ ವಹಿಸಿಕೊಳ್ಳುವುದು ಅಸಾಧ್ಯವಾಗಿದೆ. ಏಕೆಂದರೆ, ಅಧ್ಯಾಪಕರು/ಅಧ್ಯಾಪಕೇತರ ಉದ್ಯೋಗಿಗಳಿಗೆ ಪ್ರತಿ ಮಾಹೆ 3.50 ಕೋಟಿ ರೂ.ಗಳ ವೇತನ ಪಾವತಿಸಲಾಗುತ್ತಿದೆ. ಪ್ರಸ್ತುತ ವಿಶ್ವವಿದ್ಯಾನಿಲಯದಲ್ಲಿ ಯಾವುದೇ ಠೇವಣಿಗಳು ಹಾಗೂ ಇತರೆ ಅನುದಾನಗಳು ಲಭ್ಯವಿಲ್ಲದಿರುವುದರಿಂದ ಪ್ರತಿ ತಿಂಗಳು ಈಗ ನೀಡುತ್ತಿರುವ ವೇತನವನ್ನು ಸರಿದೂಗಿಸುವುದು ಸಮಸ್ಯೆಯಾಗಿದೆ. ಅತಿಥಿ ಉಪನ್ಯಾಸಕರುಗಳಿಗೆ ಈಗಾಗಲೇ ನೀಡುತ್ತಿರುವ ವೇತನವು ಹೆಚ್ಚಾಗಿರುತ್ತದೆ. ಅದರಲ್ಲೂ ಸಂಭಾವನೆಯನ್ನು ಪರಿಷ್ಕರಿಸಿ ಎರಡು ಪೂರ್ಣಗೊಳ್ಳುವ ಮುನ್ನವೇ ಸಮಿತಿಯು ಸಂಭಾವನೆಯನ್ನು ಪರಿಷ್ಕರಿಸಿರುತ್ತದೆ. ಸಮಿತಿಯು ಪರಿಷ್ಕರಿಸಿರುವ ಸಂಭಾವನೆಗಿಂತ ಈ ಸಿಂಡಿಕೇಟ್ ಸಭೆಯು ಹೆಚ್ಚಾಗಿ ಮಾಡುವುದಕ್ಕೆ ಶಿಫಾರಸ್ಸು ಮಾಡಿದ್ದಲ್ಲಿ, ಮುಂದಿನ ದಿನಗಳಲ್ಲಿ ವಿಶ್ವವಿದ್ಯಾನಿಲಯವು ಆರ್ಥಿಕ ಸಮಸ್ಯೆ ಎದುರಿಸಬೇಕಾಗಿರುತ್ತದೆ. ಇತರೆ ವಿಶ್ವವಿದ್ಯಾನಿಲಯಗಳಿಗಿಂತ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರುಗಳ ಸಂಖ್ಯೆಯೂ ಸಹ ಹೆಚ್ಚಾಗಿದೆ. ಯುಜಿಸಿ ಅಥವಾ ರಾಜ್ಯ ಸರ್ಕಾರವು ಖಾಯಂ ಅಧ್ಯಾಪಕರುಗಳಿಗೆ ಹಾಗೂ ಉದ್ಯೋಗಿಗಳಿಗೆ 5-8 ವರ್ಷಕ್ಕೆ ಮಾತ್ರ ವೇತನ ಪರಿಷ್ಕರಿಸುತ್ತದೆ. ವೇತನ ನೀಡುವುದು ಸ್ವಲ್ಪ ದಿನಗಳು ದಿನಗಳು ತಡವಾದರೆ, ಅತಿಥಿ ಉಪನ್ಯಾಸಕರು ಗಲಾಟೆ ಮಾಡುತ್ತಾರೆ. ಈಗಾಗಲೇ ಇಂತಹ ಸಮಸ್ಯೆಗಳು ಎರಡು ಬಾರಿ ಉದ್ಭವಿಸಿದೆ. ಮೂರನೇ ಬಾರಿ ಗಲಾಟೆ ಮಾಡಿ ದೈನಂದಿನ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಅಡ್ಡಿಪಡಿಸಿದ್ದರೆ. ಮುಂದಿನ ಶಿಸ್ತು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ ಹಾಗೂ ಮುಂದೆ ಇಂತಹ ಸಮಸ್ಯೆಗಳು ಉದ್ಭವಿಸಿದ್ದಲ್ಲಿ ಅಥವಾ ನಿಗಧಿತ ಅವಧಿಯಲ್ಲಿ ಸಂಭಾವನೆಯನ್ನು ಪಾವತಿಸಲು ಸಾಧ್ಯವಾಗದಿದ್ದರೆ ಹಣಕಾಸು ಅಧಿಕಾರಿಯನ್ನು ಹೊರತುಪಡಿಸಿ. august body ಹೊಣೆಯಾಗುವಂತಿದ್ದರೆ ಮಾತ್ರ ಸಂಭಾವನೆಯನ್ನು ಪರಿಷ್ಕರಿಸಲು ಅನುಮೋದಿಸಬಹುದೆಂದು ತಿಳಿಸಿದರು.

| | |
|---|---|
| | ಹಾಗೆಯೇ. ಶ್ರೀ ಎಸ್.ಡಿ.ದೊಡ್ಡಚಾರಿ ಅವರು ವಿಶ್ವವಿದ್ಯಾನಿಲಯವು ಪ್ರತಿ ಮಾಹೆ ಅಧ್ಯಾಪಕರುಗಳಿಗೆ ನೀಡುವ ವೇತನಕ್ಕಿಂತ ಅಧ್ಯಾಪಕೇತರ ಉದ್ಯೋಗಿಗಳಿಗೆ ನೀಡುವ ವೇತನವು ಹೆಚ್ಚಾಗಿರುತ್ತದೆ ಎಂದು ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಿಸಿದಂತೆ ಮುಂದುವರೆದು ಮಾತನಾಡಿ. ತಾತ್ಕಾಲಿಕ ಅಧ್ಯಾಪಕೇತರ ಉದ್ಯೋಗಿಗಳ ನೇಮಕಾತಿ ಮಾಡುವುದು ನನ್ನ ಗಮನಕ್ಕೆ ಬಂದಿದ್ದರೆ ವಿರೋಧ ವ್ಯಕ್ತಪಡಿಸುತ್ತಿದೆ ಎಂದು ಹೇಳಿದರು.<br><br>ಡಾ. ಚೈತ್ರ ನಾರಾಯಣ ಅವರು ಮಾತನಾಡಿ. ಒಂದೇ ಬಾರಿಗೆ ಪ್ರಸ್ತುತ ವೇತನಕ್ಕಿಂತ ಪರಿಷ್ಕೃತ ವೇತನವನ್ನು 10,000/- ರೂ.ಗಳಿಗೆ ಹೆಚ್ಚಿಸುವುದಕ್ಕೆ ನನ್ನ ಆಕ್ಷೇಪಣೆಯಿರುತ್ತದೆ. ಏಕೆಂದರೆ ಯಾವುದೇ ಶಿಕ್ಷಣ ಸಂಸ್ಥೆಯಲ್ಲೂ ಇಷ್ಟು ಹೆಚ್ಚಿನ ವೇತನವನ್ನು ಒಂದೇ ಬಾರಿ ಪರಿಷ್ಕರಿಸಿರುವುದಿಲ್ಲವೆಂದರು.<br><br>ಶ್ರೀ ಎಸ್.ಡಿ.ದೊಡ್ಡಚಾರಿ ಅವರು ಮಾತನಾಡಿ. ಕೆಲವು ಅಧ್ಯಯನ ವಿಭಾಗದಲ್ಲಿ Self Finance Scheme ಅಡಿಯಲ್ಲಿ ಎಷ್ಟು ಮಂದಿ ತಾತ್ಕಾಲಿಕ ಅಧ್ಯಾಪಕರನ್ನು ನೇಮಕಾತಿ ಮಾಡಲಾಗಿದೆಯೆಂದು ವಿವರವನ್ನು ಪಡೆದು ಪರಿಶೀಲಿಸಿದಾಗ, ಇವರುಗಳಿಗೆ ವಿಶ್ವವಿದ್ಯಾನಿಲಯದಿಂದ ಹೆಚ್ಚಿನ ಆರ್ಥಿಕ ಹೊರೆಯಾಗುತ್ತಿದೆ ಎಂದರು. ಎಲ್ಲಾ ವಿಭಾಗ/ಕಾಲೇಜು/ಸಂಸ್ಥೆ/ಕೇಂದ್ರಗಳಿಂದ ಬೋಧನಾ ಕಾರ್ಯಭಾರದ ವಿವರವನ್ನು ಪಡೆದುಕೊಂಡು ಅವಶ್ಯಕತೆಗನುಗುಣವಾಗಿ ಅತಿಥಿ ಉಪನ್ಯಾಸಕರುಗಳನ್ನು ನೇಮಕ ಮಾಡಿಕೊಳ್ಳುವುದರಿಂದ ಅತಿಥಿ ಉಪನ್ಯಾಸಕರುಗಳ ಸಂಖ್ಯೆ ಕಡಿಮೆಯಾಗುವುದರಿಂದ, ಅವರುಗಳಿಗೆ ಬೋಧನಾ ಕಾರ್ಯಭಾರ ಹಾಗೂ ವೇತನವನ್ನು ಹೆಚ್ಚಿಸಲು ಅವಕಾಶವಾಗುತ್ತದೆಂದು ತಿಳಿಸಿದರು.<br><br>ಡಾ. ನಿರ್ಮಲ ಅವರು ಮಾತನಾಡಿ, ಹಿಂದಿನ ಎರಡು ಶೈಕ್ಷಣಿಕ ಸಾಲಿನಲ್ಲಿ ವಿದ್ಯಾರ್ಥಿಗಳ ಪ್ರವೇಶಾತಿಯು ನಿಗಧಿತ ಸಂಖ್ಯೆಗಿಂತ ಕಡಿಮೆಯಾಗುತ್ತಿರುವುದರಿಂದ, ವಿಶ್ವವಿದ್ಯಾನಿಲಯವು ಆರ್ಥಿಕ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಅತಿಥಿ ಉಪನ್ಯಾಸಕರುಗಳಿಗೆ ಸಂಭಾವನೆ ಪರಿಷ್ಕರಿಸಲು ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಿದರು.<br><br>**ಈ ಸಂಬಂಧ ಸುದೀರ್ಘವಾಗಿ ಚರ್ಚಿಸಿದ ಅಧ್ಯಕ್ಷರು ಹಾಗೂ ಸದಸ್ಯರುಗಳು ಕೆಳಕಂಡ ತೀರ್ಮಾನದಲ್ಲಿ ನಮೂದಿಸಿರುವಂತೆ ಪರಿಷ್ಕರಿಸಲು ತೀರ್ಮಾನಿಸಲಾಯಿತು.**<br><br>ಕೋರ್ಟ್‌ನಲ್ಲಿ ದಾವೆ ಹೂಡಿರುವ ಅತಿಥಿ ಉಪನ್ಯಾಸಕರುಗಳಿಗೂ ಈ ಪರಿಷ್ಕೃತ ವೇತನವನ್ನು ವಿಸ್ತರಿಸಬೇಕೆಂದು ಡಾ. ಈ.ಸಿ.ನಿಂಗರಾಜ್ ಗೌಡ, ಡಾ.ಎಂ.ಎಸ್.ದಾಮೋದರ ಆಗ್ರಹಿಸಿದರು.<br><br>ಶ್ರೀ ಎಸ್.ಡಿ.ದೊಡ್ಡಚಾರಿ ಅವರು ಮಾತನಾಡಿ. ಯುವರಾಜ ಕಾಲೇಜಿನಲ್ಲಿ ನೇಮಕಗೊಂಡಿದ್ದ ಅತಿಥಿ ಉಪನ್ಯಾಸಕರುಗಳನ್ನು ಬಿಡುಗಡೆ ಮಾಡುವ ಸಂದರ್ಭದಲ್ಲಿ ಕೋರ್ಟ್‌ನಿಂದ ಯಥಾಸ್ಥಿತಿ ಮುಂದುವರೆಸುವಂತೆ ಮಧ್ಯಂತರ ಆದೇಶ ಬಂದಿರುತ್ತದೆ. ಈ ಸಂಬಂಧ ಅತಿಥಿ ಉಪನ್ಯಾಸಕರುಗಳನ್ನು ಮುಂದುವರೆಸಿದ್ದರೂ, ಬೋಧನಾ ಕಾರ್ಯಭಾರವನ್ನು ವಿಶ್ವವಿದ್ಯಾನಿಲಯವು ಕಡಿಮೆಗೊಳಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತಿರುವುದು ಗಮನಕ್ಕೆ ಬಂದಿದೆ. ಆದ್ದರಿಂದ ಕೋರ್ಟ್‌ನಲ್ಲಿ ದಾವೆ ಹೂಡಿರುವ ಕೆಲವು ಅತಿಥಿ ಉಪನ್ಯಾಸಕರುಗಳಿಗೆ ವೇತನ ಪರಿಷ್ಕರಿಬಹುದೆಂದು ತಿಳಿಸಿದರು. |

ಡಾ. ಈ.ಸಿ.ನಿಂಗರಾಜ್ ಗೌಡ, ಡಾ.ಎಂ.ಎಸ್.ದಾಮೋದರ ಮತ್ತು ಪ್ರೊ. ಜಿ.ವೆಂಕಟೇಶ್ ಕುಮಾರ್ ಅವರುಗಳು ಮಾತನಾಡಿ, ತಮ್ಮನ್ನು ಖಾಯಂಗೊಳಸಬೇಕೆಂದು ಕೆಲವು ಅತಿಥಿ ಉಪನ್ಯಾಸಕರುಗಳ ಧಾವೆ ಹೂಡಿರುವುದರಿಂದ, ವಿಶ್ವವಿದ್ಯಾನಿಲಯವು ಖಾಯಂಗೊಳಸಲು ಸಾಧ್ಯವಿಲ್ಲವೆಂದು ಅಪೀಲು ಸಲ್ಲಿಸಿರುತ್ತದೆ. ಅದರೆ, ಈ ಪರಿಷ್ಕೃತ ವೇತನ ಪರಿಷ್ಕರಿಸಲು ವಿಶ್ವವಿದ್ಯಾನಿಲಯಕ್ಕೆ ಅವಕಾಶವಿರುವುದರಿಂದ ಸಂಭಾವನೆಯನ್ನು ಪರಿಷ್ಕರಿಸಬಹುದೆಂದು ಸಭೆಯ ಗಮನಕ್ಕೆ ತಂದರು.

ಈ ಸಂಬಂಧ ಕೂಲಂಕಷವಾಗಿ ಚರ್ಚಿಸಿದ ಸಭೆಯು ಕೋರ್ಟ್‌ನಲ್ಲಿ ದಾವೆ ಹೂಡಿರುವ ಕೆಲವು ಅತಿಥಿ ಉಪನ್ಯಾಸಕರುಗಳಿಗೆ ಮೇಲ್ಕಂಡಂತೆ ಸಂಭಾವನೆಯನ್ನು ಪರಿಷ್ಕರಿಸುವ ಸಂಬಂಧ ಸರ್ಕಾರಕ್ಕೆ ಪತ್ರ ಬರೆಯಲಾಗುವುದು. ತದನಂತರ ಸರ್ಕಾರದ ನಿರ್ದೇಶನದಂತೆ ಕ್ರಮ ವಹಿಸಲು ಸಭೆಯು ಸಮ್ಮತಿಸಿತು.

**ತೀರ್ಮಾನ**

ಮೈಸೂರು ವಿಶ್ವವಿದ್ಯಾನಿಲಯದ ವಿವಿಧ ಅಧ್ಯಯನ ವಿಭಾಗ/ಕೇಂದ್ರ ಹಾಗೂ ಘಟಕ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರುಗಳಿಗೆ ದಿನಾಂಕ: 01-10-2022 ರಿಂದ ಅನ್ವಯವಾಗುವಂತೆ ಈ ಕೆಳಕಂಡಂತೆ ಸಂಭಾವನೆಯನ್ನು ಪರಿಷ್ಕರಿಸಲು ಸಭೆಯು ಅನುಮತಿಸಿತು.

| ಕ್ರ. ಸಂ. | ವಾರಕ್ಕೆ ನಿಗದಿಪಡಿಸಿರುವ ಕಾರ್ಯಭಾರ (ಗಂಟೆಗಳಲ್ಲಿ) | ಪ್ರಸ್ತುತ ನಿಗದಿಪಡಿಸಿರುವ ಸಂಭಾವನೆ | | ಪರಷ್ಕರಿಸಿರುವ ಸಂಭಾವನೆ | |
|---|---|---|---|---|---|
| | | NET/SLET/Ph.D ವಿದ್ಯಾರ್ಹತೆಯನ್ನು ಹೊಂದಿರುವ ಅತಿಥಿ ಉಪನ್ಯಾಸಕರುಗಳಿಗೆ ನಿಗದಿಪಡಿಸಿದ್ದ ಸಂಭಾವನೆ (ರೂ.ಗಳಲ್ಲಿ) | NET/SLET/Ph.D ವಿದ್ಯಾರ್ಹತೆಯನ್ನು ಹೊಂದಿರದ ಅತಿಥಿ ಉಪನ್ಯಾಸಕರುಗಳಿಗೆ ನಿಗದಿಪಡಿಸಿದ್ದ ಸಂಭಾವನೆ (ರೂ.ಗಳಲ್ಲಿ) | NET/SLET/Ph.D ವಿದ್ಯಾರ್ಹತೆಯನ್ನು ಹೊಂದಿರುವ ಅತಿಥಿ ಉಪನ್ಯಾಸಕರುಗಳಿಗೆ ನಿಗದಿಪಡಿಸಿದ್ದ ಸಂಭಾವನೆ (ರೂ.ಗಳಲ್ಲಿ) | NET/SLET/Ph.D ವಿದ್ಯಾರ್ಹತೆಯನ್ನು ಹೊಂದಿರದ ಅತಿಥಿ ಉಪನ್ಯಾಸಕರುಗಳಿಗೆ ನಿಗದಿಪಡಿಸಿದ್ದ ಸಂಭಾವನೆ (ರೂ.ಗಳಲ್ಲಿ) |
| 1 | 04 | 8,500/- | 8,000/- | 12,000/- | 8,800/- |
| 2 | 08 | 18,500/- | 16,000/- | 24.000/- | 17,600/- |
| 3 | 12 | 28,000/- | 24,000/- | 37,000/- | 26,400/- |

ಹಾಗೂ

ಅತಿಥಿ ಉಪನ್ಯಾಸಕರುಗಳನ್ನು ಹೊರತುಪಡಿಸಿ, ಹಲವು ಕ್ಷೇತ್ರಗಳಲ್ಲಿ ನುರಿತ ಅಧ್ಯಾಪಕರನ್ನು ಆಹ್ವಾನಿತ ಉಪನ್ಯಾಸಕರಾಗಿ ವಾರದಲ್ಲಿ 04 ಗಂಟೆಗಳ ಬೋಧನಾ ಕಾರ್ಯಭಾರವನ್ನು ನಿರ್ವಹಿಸುವವರಿಗೆ ಗಂಟೆಗೆ ರೂ.700/- ರಿಂದ ರೂ.800/-ಗಳಿಗೆ ಸಂಭಾವನೆಯನ್ನು ಪರಿಷ್ಕರಿಸಲು ಸಹ ಸಭೆಯಲ್ಲಿ ತೀರ್ಮಾನಿಸಲಾಯಿತು.

**ಸಾಮಾನ್ಯ ಸಭೆ 2022/6.28**

ವಿಶ್ವವಿದ್ಯಾನಿಲಯದಲ್ಲಿ ನಿಯೋಜನೆಯ ಆಧಾರದ ಮೇಲೆ ಕಾರ್ಯನಿರ್ವಹಿಸಲು ಮಂಜೂರಾಗಿರುವ ಹುದ್ದೆಗಳ ಸಂಬಂಧ ಸಿಂಡಿಕೇಟಿನ ಸದಸ್ಯರಾದ ಶ್ರೀ ಎಂ.ಬಿ. ಗಪ್ಪಣ್ಣ ಅವರು ಸಲ್ಲಿಸಿರುವ ಪ್ರಸ್ತಾವನೆಯ ಬಗ್ಗೆ.

**ತೀರ್ಮಾನ**

ಗಮನಿಸಲಾಯಿತು.

**ಸಾಮಾನ್ಯ ಸಭೆ 2022/6.29**

ಮಂಡ್ಯ ಸ್ನಾತಕೋತ್ತರ ಕೇಂದ್ರದ ಹಿಂಭಾಗದಲ್ಲಿ ಗ್ರಾಮಸ್ಥರು/ರೈತರು ಇವರಿಗೆ ಓಡಾಡಲು ರಸ್ತೆ ಕಲ್ಪಿಸಲು ಕೋರಿರುವ ಬಗ್ಗೆ.

**ತೀರ್ಮಾನ**

ಮಂಡ್ಯ ಸ್ನಾತಕೋತ್ತರ ಕೇಂದ್ರದ ಹಿಂಭಾಗದಲ್ಲಿ ಗ್ರಾಮಸ್ಥರು/ರೈತರು ಇವರಿಗೆ ಓಡಾಡಲು ರಸ್ತೆ ಕಲ್ಪಿಸುವ ಸಂಬಂಧ ಮಾನ್ಯ ಕುಲಪತಿಯವರು ಖುದ್ದಾಗಿ ಸಾಧಕ-ಬಾಧಕಗಳನ್ನು ಪರಿಶೀಲಿಸಿದ ನಂತರ ಮುಂದಿನ ಕ್ರಮ ತೆಗೆದುಕೊಳ್ಳಲು ಸಭೆಯಲ್ಲಿ ನಿರ್ಧರಿಸಲಾಯಿತು.

| | |
|---|---|
| ಸಾಮಾನ್ಯ ಸಭೆ 2022/6.30 | ವಿಶ್ವವಿದ್ಯಾನಿಲಯದ ನಿವೃತ್ತ ನೌಕರರಿಗೆ ಪಿಂಚಣಿ/ಕುಟುಂಬ ಪಿಂಚಣಿ ಸೌಲಭ್ಯಗಳ ಪಾವತಿಗೆ ಸರ್ಕಾರದಿಂದ ಮಂಜೂರಾದ 2022-23ನೇ ಸಾಲಿನಲ್ಲಿ ಅನುದಾನ ಕೊರತೆ ಇರುವುದರಿಂದ ಪಿಂಚಣಿ "CORPUS FUND"ನಿಂದ ಹಣ ಹಿಂಪಡೆಯುವ ಸಂಬಂಧ. |
| ತೀರ್ಮಾನ | ಸಿಂಡಿಕೇಟ್ ಸಭೆಯ ತೀರ್ಮಾನವನ್ನು ಕಾಯ್ದಿರಿಸಿ. ದಿನಾಂಕ: 25-06-2022ರಂದು ಜರುಗಿದ ಹಣಕಾಸು ಸಮಿತಿ ಸಭೆಯಲ್ಲಿ 2022-23ನೇ ಸಾಲಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ನಿವೃತ್ತರಾಗುವ/ ನಿವೃತ್ತರಾದ ಅಧ್ಯಾಪಕ ಹಾಗೂ ಅಧ್ಯಾಪಕೇತರ ನೌಕರರುಗಳಿಗೆ ಪಿಂಚಣಿ/ಕುಟುಂಬ ಪಿಂಚಣಿ ಸೌಲಭ್ಯಗಳ ಪಾವತಿಗೆ ಸರ್ಕಾರದಿಂದ ಮಂಜೂರಾದ 2022-23ನೇ ಸಾಲಿನಲ್ಲಿ ಅನುದಾನ ಕೊರತೆಯಿರುವುದರಿಂದ LIC "CORPUSS FUND"-"New Group Superannuation Cash Accumulation Benefit Scheme ನಲ್ಲಿ ಠೇವಣಿಯಿಟ್ಟಿರುವ ಹಣದಿಂದ ಕೊರತೆಯಿರುವ ರೂ.54 ಕೋಟಿಗಳನ್ನು ನಾಲ್ಕು ಕಂತುಗಳಲ್ಲಿ ಹಿಂಪಡೆದು ಪಿಂಚಣಿ ಮತ್ತು ಪಿಂಚಣಿ ಸೌಲಭ್ಯಗಳನ್ನು ಪಾವತಿಸಲು ಹಾಗೂ ಸರ್ಕಾರದಿಂದ ಅನುದಾನ ಬಂದ ನಂತರ ಮರು ಹೂಡಿಕೆ ಮಾಡಲು ತೀರ್ಮಾನಿಸಿರುವುದನ್ನು ಅನುಸಮರ್ಥಿಸಿತು. |
| ಸಾಮಾನ್ಯ ಸಭೆ 2022/6.31 | 2022-23ನೇ ಸಾಲಿನಲ್ಲಿ ವಿಶ್ವವಿದ್ಯಾನಿಲಯದ ನಿವೃತ್ತ ನೌಕರರಿಗೆ ಪಿಂಚಣಿ/ಕುಟುಂಬ ಪಿಂಚಣಿ ಸೌಲಭ್ಯಗಳ ಪಾವತಿಗೆ ಆಗಸ್ಟ್-2022ರಿಂದ ಮಾರ್ಚ್ 2023 ಕೊರತೆ ಇರುವ ರೂ. 50 ಕೋಟಿಗಳನ್ನು LIC "CORPUS FUND"ನಿಂದ ಹಣ ಹಿಂಪಡೆಯುವ ಬಗ್ಗೆ. |
| ತೀರ್ಮಾನ | ಸಿಂಡಿಕೇಟ್ ಹಾಗೂ ಹಣಕಾಸು ಸಮಿತಿ ಸಭೆಗಳ ತೀರ್ಮಾನವನ್ನು ಕಾಯ್ದಿರಿಸಿ ಹಾಗೂ ಮಾನ್ಯ ಕುಲಪತಿಗಳ ಮೌಖಿಕ ಆದೇಶದ ಮೇರೆಗೆ. ಜುಲೈ 2022ರ ಮಾಹೆಯ ಪಿಂಚಣಿ ಮತ್ತು ಪಿಂಚಣಿ ಸೌಲಭ್ಯಗಳನ್ನು ಪಾವತಿಸಿ ರೂ. 7.00 ಕೋಟಿಗಳನ್ನು LIC ಇವರಿಂದ ಹಿಂಪಡೆದಿದ್ದು, ಸರ್ಕಾರದಿಂದ ಮಾಹೆಯಾನ ಪಿಂಚಣಿ ರೂ. 4.16 ಕೋಟಿಗಳು ನಿಗಧಿತ ಅವಧಿಯಲ್ಲಿ ವಿಶ್ವವಿದ್ಯಾನಿಲಯಕ್ಕೆ ಬರದ ಕಾರಣ ಆಗಸ್ಟ್ 2022 ರಿಂದ ಮುಂದಿನ ಆರು ತಿಂಗಳ ಅವಧಿಗೆ ಕೊರತೆಯಿರುವ ರೂ.50 ಕೋಟಿಗಳನ್ನು ಒಟ್ಟು ಆರು ಕಂತುಗಳಲ್ಲಿ LIC ಯಿಂದ ಹಿಂಪಡೆಯಲು ಹಾಗೂ ಸರ್ಕಾರದಿಂದ ಅನುದಾನ ಬಂದ ನಂತರ ಮರು ಹೂಡಿಕೆ ಮಾಡಲು ಸಭೆಯು ಅನುಮತಿಸಿತು. |
| ಸಾಮಾನ್ಯ ಸಭೆ 2022/6.32 | ಜುಲೈ 2022ರ ಮಾಹೆಯಿಂದ ಏಪ್ರಿಲ್ 2023ರ ಮಾಹೆಯವರೆಗೆ ವಿ.ವಿ. ನೌಕರರ ಗುಂಪು ವಿಮಾ ಯೋಜನೆಯ ಪಾಲಿಸಿ ಸಂಖ್ಯೆ : 506002423 ಅನ್ನು ಪ್ರತಿ ತಿಂಗಳು ಪಾವತಿಸುವ ಬದಲು ವಾರ್ಷಿಕವಾಗಿ ಪಾವತಿಸುವ ಬಗೆಗೆ. |
| ತೀರ್ಮಾನ | ಜುಲೈ 2022ರ ಮಾಹೆಯಿಂದ ಏಪ್ರಿಲ್ 2023ರ ಮಾಹೆಯವರೆಗೆ ವಿ.ವಿ. ನೌಕರರ ಗುಂಪು ವಿಮಾ ಯೋಜನೆಯ ಪಾಲಿಸಿ ಸಂಖ್ಯೆ : 506002423 ಕ್ಕೆ ಪ್ರತಿ ತಿಂಗಳು ಪಾವತಿಸುವ ಬದಲು ವಾರ್ಷಿಕವಾಗಿ ಒಂದೇ ಕಂತಿನಲ್ಲಿ ಮುಂಗಡವಾಗಿ ಪಿಂಚಣಿ ಖಾತೆಯಿಂದ ಭರಿಸಲು ಹಾಗೂ ಉದ್ಯೋಗಿಗಳ ವೇತನದಿಂದ ಪ್ರತಿ ತಿಂಗಳು ಸಂದಾಯವಾಗುವ ಮೊತ್ತವನ್ನು ವಿಶ್ವವಿದ್ಯಾನಿಲಯದ ಪಿಂಚಣಿ ಖಾತೆಗೆ ಮರುಭರಿಕೆ ಮಾಡಿಕೊಳ್ಳಲು ಅನುಮೋದಿಸಲಾಯಿತು. |
| ಸಾಮಾನ್ಯ ಸಭೆ 2022/6.33 | ಶ್ರೀ ಪ್ರದೀಪ್ ಕುಮಾರ್ ದೀಕ್ಷಿತ್, ಸಿಂಡಿಕೇಟ್ ಸದಸ್ಯರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ಪ್ರಸ್ತಾವನೆಯ ಬಗ್ಗೆ. |
| ತೀರ್ಮಾನ | ಶ್ರೀ ಪ್ರದೀಪ್ ಕುಮಾರ್ ದೀಕ್ಷಿತ್, ಸಿಂಡಿಕೇಟ್ ಸದಸ್ಯರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಸಲ್ಲಿಸಿದ್ದ ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚ್ಯವಿದ್ಯಾ ಸಂಶೋಧನಾಲಯದ ಅಭಿವೃದ್ಧಿಯ ವಿವರವನ್ನು ಸಭೆಯಲ್ಲಿ ಗಮನಿಸಲಾಯಿತು. |

| | |
|---|---|
| ಸಾಮಾನ್ಯ ಸಭೆ 2022/6.34 | ಪ್ರಾಚ್ಯವಿದ್ಯಾ ಸಂಶೋಧನಾಲಯಕ್ಕೆ ಸಂಬಂಧಪಟ್ಟಂತೆ ರಚಿಸಿರುವ ಅಧಿನಿಯಮದ ಬಗ್ಗೆ. |
| | ಶ್ರೀ ಪ್ರದೀಪ್ ಕುಮಾರ್ ದೀಕ್ಷಿತ್ ಅವರು ಮಾತನಾಡಿ. ಪ್ರಾಚ್ಯವಿದ್ಯಾ ಸಂಶೋಧನಾಲಯಕ್ಕೆ ಸಂಬಂಧಪಟ್ಟಂತೆ ರಚಿಸಿರುವ ಅಧಿನಿಯಮವನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸಿರುವುದು ಸರಿಯಷ್ಟೆ. ಆದರೆ. ಸದರಿ ಅಧಿನಿಯಮದಲ್ಲಿ ಈ ಕೆಳಕಂಡ ಮಾರ್ಪಾಡುಗಳನ್ನು ಮಾಡುವುದು ಸೂಕ್ತವೆಂದು ತಿಳಿಸಿದರು.<br>1) ಪ್ರಾಚ್ಯವಿದ್ಯಾ ಸಂಶೋಧನಾಲಯಕ್ಕೆ ಸಂಸ್ಕೃತ ವಿಷಯವು ಪ್ರಮುಖವಾಗಿರುವುದರಿಂದ. Mode of Recruitment for the Posts of Director, Deputy Director, Assistant Director and Research Assistant Grade-I and Grade-II of the Institute ನಲ್ಲಿರುವ ಕನಿಷ್ಠ ವಿದ್ಯಾರ್ಹತೆಯಲ್ಲಿ Samskrit/Pali/Prakrit/ Indology/Kannada/Jainology ಗಳ ವಿಷಯದಲ್ಲಿ ಸ್ನಾತಕೋತ್ತರ ಪದವಿ ಮಾಡಿರುವ ಅಭ್ಯರ್ಥಿಗಳನ್ನು ಪರಿಗಣಿಸುವ ಬದಲು ಕೇವಲ ಸಂಸ್ಕೃತ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ ಆಭ್ಯರ್ಥಿಗಳನ್ನು ಪರಿಗಣಿಸುವುದು ಸೂಕ್ತವೆಂದು;<br>2) ಪ್ರಾಚ್ಯವಿದ್ಯಾ ಸಂಶೋಧನಾಲಯಕ್ಕೆ ನಿರ್ದೇಶಕರಾಗುವವರಿಗೆ ಪಬ್ಲಿಕೇಷನ್ ಬಹಳ ಮುಖ್ಯವಾದುದರಿಂದ. ಸಂಸ್ಕೃತ ವಿಷಯದಲ್ಲಿ ಕನಿಷ್ಠ ಎರಡು ಪ್ರಕಟಣೆಗಳನ್ನು ಹೊರಡಿಸಬೇಕೆಂದು ಅಧಿನಿಯಮದಲ್ಲಿ ನಮೂದಿಸಿ ಮಾರ್ಪಾಡು ಮಾಡುವುದು. |
| ತೀರ್ಮಾನ | ಪ್ರಾಚ್ಯವಿದ್ಯಾ ಸಂಶೋಧನಾಲಯಕ್ಕೆ ಸಂಬಂಧಪಟ್ಟಂತೆ ರಚಿಸಿರುವ ಅಧಿನಿಯಮ ಸಮಿತಿಯ ವಿಶೇಷ ಆಹ್ವಾನಿತರಾದ ಶ್ರೀ ಪ್ರದೀಪ್ ಕುಮಾರ್ ದೀಕ್ಷಿತ್ ಅವರ ಅಭಿಪ್ರಾಯದಂತೆ ಅಧಿನಿಯಮದಲ್ಲಿ ಮೇಲ್ಕಂಡಂತೆ ಮಾರ್ಪಾಡುಗಳನ್ನು ಮಾಡುವುದರೊಂದಿಗೆ ಸಭೆಯು ಸಿದ್ಧಪಡಿಸಲಾಗಿರುವ ಪ್ರಾಚ್ಯವಿದ್ಯಾ ಸಂಶೋಧನಾಲಯಕ್ಕೆ ಸಂಬಂಧಪಟ್ಟಂತೆ ರಚಿಸಿರುವ ಅಧಿನಿಯಮವನ್ನು ಅನುಮೋದಿಸಿತು. |
| ಸಾಮಾನ್ಯ ಸಭೆ 2022/6.35 | ಆನ್‌ಲೈನ್ ಶಿಕ್ಷಣದಡಿಯಲ್ಲಿ ಮುಂದಿನ ಶೈಕ್ಷಣಿಕ ವರ್ಷದಿಂದ ಕೆಳಗೆ ನಮೂದಿಸಿದ ಹೆಚ್ಚುವರಿ Specialized/Standalone Programmes in MBA and BBA Programme ಗಳನ್ನು ಅಳವಡಿಸಿಕೊಳ್ಳುವ ಬಗ್ಗೆ ದಿನಾಂಕ : 23-12-2021ರಂದು ನಡೆದ ಶಿಕ್ಷಣ ಮಂಡಳಿ ಸಭೆಯ ಶಿಫಾರಸ್ಸನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸಿರುವ ಬಗ್ಗೆ. |
| ತೀರ್ಮಾನ | ಆನ್‌ಲೈನ್ ಶಿಕ್ಷಣದಡಿಯಲ್ಲಿ ಮುಂದಿನ ಶೈಕ್ಷಣಿಕ ವರ್ಷದಿಂದ ಕೆಳಗೆ ನಮೂದಿಸಿದ ಹೆಚ್ಚುವರಿ Specialized/Standalone Programmes in MBA and BBA Programme ಗಳನ್ನು ಅಳವಡಿಸಿಕೊಳ್ಳುವ ಬಗ್ಗೆ ದಿನಾಂಕ : 23-12-2021ರಂದು ನಡೆದ ಶಿಕ್ಷಣ ಮಂಡಳಿ ಸಭೆಯ ಶಿಫಾರಸ್ಸನ್ನು ಸಭೆಯು ಅನುಮೋದಿಸಿತು. |
| ಸಾಮಾನ್ಯ ಸಭೆ 2022/6.36 | ಆನ್‌ಲೈನ್ ಶಿಕ್ಷಣದಡಿಯಲ್ಲಿ ಪ್ರಸಕ್ತ ಶೈಕ್ಷಣಿಕ ವರ್ಷದಿಂದ New Fee Structure for Online Programs Common Fee Types-Post Graduate Degree and Diploma ಕೋರ್ಸುಗಳಿಗೆ ಅಳವಡಿಸಿಕೊಳ್ಳುವ ಬಗ್ಗೆ ದಿನಾಂಕ: 30-06-2022ರಂದು ನಡೆದ ಶಿಕ್ಷಣ ಮಂಡಳಿ ಸಭೆಯ ಶಿಫಾರಸ್ಸನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸಿರುವ ಬಗ್ಗೆ. |
| ತೀರ್ಮಾನ | ಆನ್‌ಲೈನ್ ಶಿಕ್ಷಣದಡಿಯಲ್ಲಿ ಪ್ರಸಕ್ತ ಶೈಕ್ಷಣಿಕ ವರ್ಷದಿಂದ New Fee Structure for Online Programs Common Fee Types-Post Graduate Degree and Diploma ಕೋರ್ಸುಗಳಿಗೆ ಅಳವಡಿಸಿಕೊಳ್ಳುವ ಬಗ್ಗೆ ದಿನಾಂಕ: 30-06-2022ರಂದು ನಡೆದ ಶಿಕ್ಷಣ ಮಂಡಳಿ ಸಭೆಯ ಶಿಫಾರಸ್ಸನ್ನು ಸಭೆಯು ಅನುಮೋದಿಸಿತು. |

| | |
|---|---|
| ಸಾಮಾನ್ಯ ಸಭೆ 2022/6.37 | "Prof. B.S.Vishwanath, Prof. R.Manjunath Kini Prof. T. Veerabasappa Gowda, Endowment Lectures on Progress in Biological Sciences" ಎಂಬ ಹೆಸರಿನಲ್ಲಿ ದತ್ತಿ ಉಪನ್ಯಾಸ ಸ್ಥಾಪನೆ ಮಾಡುವ ಬಗ್ಗೆ. |
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ಅನ್ವಯ ಪ್ರಕರಣ 29(2) (r) ಪ್ರಕಾರ ಅಧ್ಯಕ್ಷರು, ಜೀವರಸಾಯನಶಾಸ್ತ್ರ ಅಧ್ಯಯನ ವಿಭಾಗ ಮತ್ತು ಹಳೆಯ & ಹಾಲಿ ಸಂಶೋಧನಾ ವಿದ್ಯಾರ್ಥಿಗಳು, ಜೀವರಸಾಯನಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ದತ್ತಿಯ ನಿಬಂಧನೆಯಲ್ಲಿರುವಂತೆ ಪ್ರತಿ ವರ್ಷ ಸದರಿ ದತ್ತಿಯ ಮೂಲಧನಕ್ಕೆ ಕ್ರೋಢಿಕೃತವಾಗುವ ಬಡ್ಡಿಯ ಹಣದಲ್ಲಿ ಶೇ.20 ರಷ್ಟನ್ನು ದತ್ತಿಯ ಮೂಲಧನಕ್ಕೆ ಸೇರಿಸಿ, ಉಳಿದ ಶೇ.80 ರಷ್ಟು ಹಣವನ್ನು "Prof.B.S.Vishwanath, Prof.R.Manjunath Kini and Prof. T. Veerabasappa Gowda, Endowment Lectures on Progress in Biological Sciences" ಎಂಬ ಹೆಸರಿನಲ್ಲಿ ಉಪನ್ಯಾಸ ದತ್ತಿ ಸ್ಥಾಪಿಸಲು ಸಭೆಯು ಅನುಮೋದಿಸಿತು. |
| ಸಾಮಾನ್ಯ ಸಭೆ 2022/6.38 | ವಿಶ್ವವಿದ್ಯಾನಿಲಯದ ವಾರ್ಷಿಕ ಘಟಿಕೋತ್ಸವದ ಸಮಾರಂಭದಲ್ಲಿ ಖಾದಿ ಹಾಗೂ ಕೈಮಗ್ಗ ಬಟ್ಟೆಗಳಿಂದ ತಯಾರಿಸಿದ ಉಡುಪು ಅಳವಡಿಸುವ ಬಗೆಗೆ. |
| ತೀರ್ಮಾನ | ವಿಶ್ವವಿದ್ಯಾನಿಲಯದ ವಾರ್ಷಿಕ ಘಟಿಕೋತ್ಸವದ ಸಮಾರಂಭದಲ್ಲಿ ಖಾದಿ ಹಾಗೂ ಕೈಮಗ್ಗ ಬಟ್ಟೆಗಳಿಂದ ತಯಾರಿಸಿದ ಉಡುಪು ಅಳವಡಿಸುವ ಬಗ್ಗೆ ಉಪ ಸಮಿತಿಯು ಸಲ್ಲಿಸಿರುವ ವರದಿ/ಶಿಫಾರಸ್ಸುಗಳನ್ನು ಸಭೆಯು ಅನುಮೋದಿಸಿತು. |
| ಸಾಮಾನ್ಯ ಸಭೆ 2022/6.39 | Visit of Prof. G. Hemantha Kumar, Vice Chancellor, University of Mysore, Mysuru to UK. |
| ತೀರ್ಮಾನ | Visit of Prof. G. Hemantha Kumar, Vice Chancellor, University of Mysore, Mysuru to Edinburgh, UK and the University to borne only the airfare from mysuru to Edinburgh, UK to back to Mysuru approved by the Syndicate. |

**ಇತರೆ ವಿಷಯಗಳು:**

1) ಡಾ. ಈ.ಸಿ. ನಿಂಗರಾಜ್ ಗೌಡರವರು ಮಾತನಾಡಿ, ಜುಲೈ 27, 2022ರಂದು ನಡೆದ ವಿಶ್ವವಿದ್ಯಾನಿಲಯದ ಸಂಸ್ಥಾಪನಾ ದಿನಾಚರಣೆಯನ್ನು ಹಾಗೂ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಇಂಜಿನಿಯರಿಂಗ್ ಕಾಲೇಜು ಪ್ರಾರಂಭಿಸಿದ್ದು, ದಿನಾಂಕ: 11-08-2022ರಂದು ಸ್ಕೂಲ್ ಆಫ್ ಇಂಜಿನಿಯರಿಂಗ್ ಕಾಲೇಜಿನ ತಂತ್ರಜ್ಞಾನ ಭವನದ ಕಟ್ಟಡ, ಕೋರ್ಸ್‌ಗಳು ಹಾಗೂ ವಿದ್ಯಾರ್ಥಿನಿಲಯ, ವಿಶ್ವವಿದ್ಯಾನಿಲಯದ ಫಾರ್ಮಸಿ ಕಾಲೇಜು ಕಟ್ಟಡ, ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗದ ಸುವರ್ಣ ಮಹೋತ್ಸವ ಕಟ್ಟಡ, ಭೂಗೋಳಶಾಸ್ತ್ರ ಮತ್ತು ಭೂವಿಜ್ಞಾನ ವಿಸ್ತರಿಸಿದ ಮೊದಲನೇ ಮಹಡಿ ಕಟ್ಟಡ, ಗಣಕ ವಿಜ್ಞಾನ ಅಧ್ಯಯನ ವಿಭಾಗದ ನವೀಕೃತ ಸಭಾಂಗಣ, ಪ್ರಾಚ್ಯವಿದ್ಯಾ ಸಂಶೋಧನಾಲಯ ಮತ್ತು ಮಿಥಿಕ್ಸ್ ಸೋಸೈಟಿ ಕಾರ್ಯಕ್ರಮ ಹಾಗೂ ಗ್ರಹನಿಧಿ ಕೃತಿ ಬಿಡುಗಡೆ, ಬಸವೇಶ್ವರ ಅಧ್ಯಯನ, ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದ ಕಟ್ಟಡ ಉದ್ಘಾಟನೆ, ವಿಶ್ವಕೋಶ 8 ಮತ್ತು 9ನೇ ಸಂಪುಟ ಅನಾವರಣ ಹಾಗೂ ಸೆಂಟರ್ ಆಫ್ ಎಕ್ಸಲೆನ್ಸ್ ನಂತಹ ವಿವಿಧ ಕಟ್ಟಡಗಳ ಉದ್ಘಾಟನಾ ಕಾರ್ಯಕ್ರಮಗಳಿಗೆ ಮಾನ್ಯ ಮುಖ್ಯಮಂತ್ರಿಗಳು ಮತ್ತು ಉನ್ನತ ಶಿಕ್ಷಣ ಸಚಿವರನ್ನು ಆಮಂತ್ರಿಸಿದಕ್ಕಾಗಿ ಮಾನ್ಯ ಕುಲಪತಿಗಳಾದ ಪ್ರೊ. ಜಿ.ಹೇಮಂತಕುಮಾರ್ ಮತ್ತು ಕುಲಸಚಿವರಾದ ಪ್ರೊ. ಆರ್.ಶಿವಪ್ಪರವರನ್ನು, ವಿಶೇಷವಾಗಿ ಅಭಿನಂದಿಸುತ್ತೇನೆ ಹಾಗೂ

ಯುವಜನ ಮಹೋತ್ಸವ ಕಾರ್ಯಕ್ರಮ ಕೂಡ ಅಭೂತಪೂರ್ವವಾಗಿ ಯಶಸ್ವಿಯಾಗಿ, ಇದರಲ್ಲಿ 32 ಸಾವಿರ ಕಾಲೇಜಿನ ವಿದ್ಯಾರ್ಥಿಗಳು, ಅಧ್ಯಾಪಕರು, ಅಧ್ಯಾಪಕೇತರರು ಭಾಗವಹಿಸಿರುವುದು ತುಂಬಾ ವಿಶೇಷವಾಗಿತ್ತು ಎಂದು ತಿಳಿಸುತ್ತಾ, ಎಲ್ಲಾ ಕಾರ್ಯಕ್ರಮಗಳು ಯಶಸ್ವಿಯಾಗಿ ಪೂರ್ಣಗೊಂಡಿದ್ದು, ಈ ಕಾರ್ಯಕ್ರಮಗಳು ಯಶಸ್ವಿಯಾಗಲು ಸಹಕರಿಸಿದ ಸಿಂಡಿಕೇಟ್ ಮತ್ತು ಶಿಕ್ಷಣ ಮಂಡಳಿಯ ಸದಸ್ಯರುಗಳಿಗೆ ಅಧ್ಯಾಪಕರು/ಅಧ್ಯಾಪಕೇತರರು/ಸಂಶೋಧನಾ ವಿದ್ಯಾರ್ಥಿಗಳು ಹಾಗೂ ಎಲ್ಲಾ ಕಾಲೇಜಿನ ವಿದ್ಯಾರ್ಥಿಗಳಿಗೂ ವೈಯಕ್ತಿಕವಾಗಿ ಧನ್ಯವಾದಗಳನ್ನರ್ಪಿಸಿದರು.

**2) ಮೈಸೂರು ವಿಶ್ವವಿದ್ಯಾನಿಲಯದ ಅತಿಥಿ ಉಪನ್ಯಾಸಕರುಗಳು ವಾರಕ್ಕೆ 15 ಗಂಟೆಗಳ ಬೋಧನಾ ಕಾರ್ಯಭಾರವನ್ನು ಹೊಂದಿರುವ ಬಗ್ಗೆ.**

ಶ್ರೀ ಪ್ರದೀಪ್ ಕುಮಾರ್ ದೀಕ್ಷಿತ್ ಅವರು ಮಾತನಾಡಿ, ಸರ್ಕಾರಿ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರುಗಳು ವಾರಕ್ಕೆ 15 ಗಂಟೆಗಳ ಬೋಧನಾ ಕಾರ್ಯಭಾರವನ್ನು ಹೊಂದಿರುವವರು ಇತರೆ ಕಾಲೇಜು/ಸಂಸ್ಥೆಗಳಲ್ಲಿಯೂ ಕಾರ್ಯ ನಿರ್ವಹಿಸುತ್ತಿರುವುದು ಕಂಡು ಬಂದಿದೆ. 15 ಗಂಟೆ ಬೋಧನಾ ಕಾರ್ಯಭಾರವನ್ನು ಹೊಂದಿದ್ದರೂ, ಹೆಚ್ಚುವರಿಯಾಗಿ ಕಾರ್ಯ ನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರುಗಳನ್ನು ಗುರುತಿಸುವ ಮೂಲಕ ವಿಶ್ವವಿದ್ಯಾನಿಲಯದಿಂದ ಬಿಡುಗಡೆ ಮಾಡಬೇಕೆಂದು ತಿಳಿಸಿದರು.

ಡಾ. ಚೈತ್ರ ನಾರಾಯಣ ಅವರು ಮಾತನಾಡಿ, ಎಲ್ಲಾ ಅತಿಥಿ ಉಪನ್ಯಾಸಕರುಗಳನ್ನು ಸಂದರ್ಶನ ಮುಖಾಂತರ ನೇಮಕಾತಿ ಮಾಡುವುದು ಸೂಕ್ತ. ಇದರಿಂದ ಅರ್ಹ ಆಭ್ಯರ್ಥಿಗಳನ್ನು ನೇಮಕ ಮಾಡಬಹುದೆಂದು ಸಲಹೆ ನೀಡಿದರು.

ಡಾ. ಎಂ.ಎಸ್.ದಾಮೋದರ ಅವರು ಮಾತನಾಡಿ, ಪಿಹೆಚ್.ಡಿ ಪದವಿ/ನೆಟ್/ಕೆ-ಸೆಟ್ ತೇರ್ಗಡೆ ಹೊಂದಿದವರಿಗೆ ಪ್ರಥಮ ಆದ್ಯತೆ ನೀಡಬೇಕೆಂದು ಹಾಗೂ 2-3 ಅಭ್ಯರ್ಥಿಗಳಿಗೆ 4 ಗಂಟೆಗಳ ಬೋಧನಾ ಕಾರ್ಯ ಹಂಚಿಕೆ ಮಾಡುವ ಬದಲು ಒಬ್ಬರಿಗೆ 15 ಗಂಟೆಗಳ ಬೋಧನಾ ಕಾರ್ಯಭಾರವನ್ನು ಹಂಚಿಕೆ ಮಾಡಿ, ಒಬ್ಬರನ್ನು ಅತಿಥಿ ಉಪನ್ಯಾಸಕರನ್ನಾಗಿ ನೇಮಕ ಮಾಡುವುದರಿಂದ ಜೀವನ ರೂಪಿಸಿದಂತಾಗುತ್ತದೆಂದು ಹೇಳಿದರು.

ಪ್ರೊ. ಜಿ.ವೆಂಕಟೇಶ್‌ಕುಮಾರ್ ಅವರು ಮಾತನಾಡಿ, ವಿಶ್ವವಿದ್ಯಾನಿಲಯದ ಎಲ್ಲಾ ಕಾಲೇಜು/ವಿಭಾಗ/ ಸಂಸ್ಥೆಯಿಂದ ಅವಶ್ಯಕತೆಗನುಗುಣವಾಗಿ ಬೋಧನಾ ಕಾರ್ಯಭಾರಗಳ ಹಾಗೂ ಖಾಲಿ ಇರುವ ಹುದ್ದೆಗಳ Ratio ವಿವರವನ್ನು ಪಡೆದುಕೊಂಡು, ತದನಂತರ ಅವಶ್ಯಕತೆಗನುಗುಣವಾಗಿ Ratio ಆಧಾರದ ಮೇಲೆ ಅತಿಥಿ ಉಪನ್ಯಾಸಕರನ್ನು ನೇಮಕಾತಿ ಮಾಡಿಕೊಳ್ಳುವುದು ಹಾಗೂ ಸರ್ಕಾರದವರು ಖಾಯಂ ಬೋಧಕರ ನೇಮಕಾತಿಗೆ ರೆಗ್ಯುಲೇಷನ್ ಮಾಡಿರುತ್ತದೆ. ಹಾಗೆಯೇ, ವಿಶ್ವವಿದ್ಯಾನಿಲಯವು ಅತಿಥಿ ಉಪನ್ಯಾಸಕರುಗಳ ನೇಮಕಾತಿಗೆ ಸಂಬಂಧಿಸಿದಂತೆ ರೆಗ್ಯುಲೇಷನ್ ಸಿದ್ಧಪಡಿಸುವುದು ಸೂಕ್ತವೆಂದರು.

ಈ ಸಂಬಂಧ ಮಾನ್ಯ ಕುಲಪತಿಯವರು ಮಾತನಾಡಿ, ಸರ್ಕಾರಿ ಕಾಲೇಜುಗಳಲ್ಲಿ ವಾರಕ್ಕೆ 15 ಗಂಟೆಗಳ ಬೋಧನಾ ಕಾರ್ಯಭಾರವನ್ನು ಹೊಂದಿರುವ ಅತಿಥಿ ಉಪನ್ಯಾಸಕರುಗಳು ಮೈಸೂರು ವಿಶ್ವವಿದ್ಯಾನಿಲಯದ ಕಾಲೇಜು/ವಿಭಾಗ/ಸಂಸ್ಥೆಗಳಲ್ಲಿಯೂ ಕಾರ್ಯ ನಿರ್ವಹಿಸುತ್ತಿರುವವರಿಗೆ ತೆಗೆದುಕೊಳ್ಳಬಹುದಾದ ಕ್ರಮದ ಬಗ್ಗೆ ಸೂಕ್ತ ನಿರ್ದೇಶನ ನೀಡಬೇಕೆಂದು ಸರ್ಕಾರಕ್ಕೆ ಪತ್ರ

ಬರೆಯಲಾಗಿದೆ. ಈ ರೀತಿ ಎರಡು ಕಡೆ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರುಗಳಿಗೆ ಈಗಾಗಲೇ ವಿಶ್ವವಿದ್ಯಾನಿಲಯದ ವತಿಯಿಂದ ನೋಟಿಸ್ ಜಾರಿಗೊಳಿಸಲಾಗಿದೆ. ಪ್ರಸಕ್ತ ಶೈಕ್ಷಣಿಕ ಅವಧಿ ಪೂರ್ಣಗೊಂಡ ನಂತರ ಎಲ್ಲಾ ಅತಿಥಿ ಉಪನ್ಯಾಸಕರುಗಳಿಗೆ ಸಂದರ್ಶನ ಮೂಲಕ ನೇಮಕ ಮಾಡಿಕೊಳ್ಳಲಾಗುವುದು. ಇದರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಪಿಹೆಚ್.ಡಿ ಪದವಿ/ನೆಟ್/ಕೆ-ಸೆಟ್ ತೇರ್ಗಡೆ ಹೊಂದಿರುವವರಿಗೆ ಪ್ರಥಮ ಆದ್ಯತೆ ನೀಡಲಾಗುವುದೆಂದು ಪ್ರಸ್ತಾಪಿಸಿದರು.

೩) **ಮೈಸೂರು ವಿಶ್ವವಿದ್ಯಾನಿಲಯದಿಂದ ಸಂಸ್ಥೆಗಳಿಗೆ ಸಂಶೋಧನಾ ಕೇಂದ್ರದ ಮಾನ್ಯತೆ ನೀಡುವ ಬಗ್ಗೆ.**

ಪ್ರೊ. ಜಿ.ವೆಂಕಟೇಶ್‌ಕುಮಾರ್ ಅವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದಿಂದ ಸಂಶೋಧನಾ ಕೇಂದ್ರದ ಮಾನ್ಯತೆ ಕೋರುವ ಎಲ್ಲಾ ಸಂಸ್ಥೆಗಳಿಗೂ ಅನುಮೋದನೆ ನೀಡುವ ಮೊದಲು ನಿಯಮಾನುಸಾರ ಸಂಶೋಧನಾ ಕಾರ್ಯ ಕೈಗೊಳ್ಳಲು ಸಂಸ್ಥೆಯಲ್ಲಿನ ಮೂಲಭೂತ ಸೌಕರ್ಯಗಳು ಹಾಗೂ ಇತರೆ ಅಗತ್ಯ ಮಾಹಿತಿಗಳನ್ನು ಪರಿಶೀಲಿಸಿ, ಪರಿವೀಕ್ಷಣಾ ಸಮಿತಿಯು ವಿಶ್ವವಿದ್ಯಾನಿಲಯಕ್ಕೆ ವರದಿ/ಶಿಫಾರಸ್ಸು ಸಲ್ಲಿಸುತ್ತಿರುವುದು ಸರಿಯಷ್ಟೆ. ಆದರೆ, ವಿಶ್ವವಿದ್ಯಾನಿಲಯದ ಮಾರ್ಗದರ್ಶಕರು ಅನುಸರಿಸುತ್ತಿರುವ ಮಾರ್ಗಸೂಚಿಗಳನ್ನು ಸಂಶೋಧನಾ ಕೇಂದ್ರದ ಮಾನ್ಯತೆ ಪಡೆದಿರುವ ಶೇ.50 ರಷ್ಟು ಸಂಸ್ಥೆಯ ಮಾರ್ಗದರ್ಶಕರು ಪಾಲಿಸುತ್ತಿಲ್ಲವೆಂದು ತಿಳಿಸುತ್ತಾ, ಇನ್ನು ಮುಂದೆ ವಿಶ್ವವಿದ್ಯಾನಿಲಯವು ಪರಿಶೀಲನೆ ಮಾಡಿ, ಮಾನ್ಯತೆ ನೀಡುವುದು ಸರಿಯೆಂದು ಅಭಿಪ್ರಾಯಿಸಿದರು.

ಪ್ರೊ. ಹೆಚ್.ರಾಜಶೇಖರ ಅವರು ಮಾತನಾಡಿ, ಕೆಲವು ಸಂಸ್ಥೆಯ ಮಾರ್ಗದರ್ಶಕರು ವಿಶ್ವವಿದ್ಯಾನಿಲಯವು ವಿಧಿಸಿರುವ ನಿಯಮಗಳನ್ನು ಪಾಲಿಸದಿರುವುದು ಗಮನಕ್ಕೆ ಬಂದಿದ್ದು, ಅಧ್ಯಾಪಕರು ಮಾರ್ಗದರ್ಶಕರಾಗಲು ಪರೀಕ್ಷಾ ವಿಭಾಗದ ಪಿಹೆಚ್.ಡಿ ವಿಭಾಗಕ್ಕೆ ಅರ್ಜಿ ಸಲ್ಲಿಸಿದಾಗ, ಆಯಾಯ ವಿಷಯದ ಅಧ್ಯಯನ ಮಂಡಳಿಯ ಅಭಿಪ್ರಾಯದ ಮೇರೆಗೆ ಕ್ರಮ ತೆಗೆದುಕೊಳ್ಳುವುದು ಸೂಕ್ತ. ಒಂದು ವೇಳೆ ಇಂತಹ ತಪ್ಪುಗಳು ಮರುಕಳಿಸಿದರೆ ಅಧ್ಯಯನ ಮಂಡಳಿಯ ಅಧ್ಯಕ್ಷರನ್ನು ಹೊಣೆಗಾರರನ್ನಾಗಿ ಮಾಡಬೇಕೆಂದು ಸಲಹೆ ನೀಡಿದರು.

ಶ್ರೀ ಎಂ.ಬಿ. ಗಪ್ಪಣ್ಣ ಅವರು ಮಾತನಾಡಿ, ವಿಶ್ವವಿದ್ಯಾನಿಲಯದ ಮಾರ್ಗಸೂಚಿಗಳನ್ನು ಅನುಸರಿಸದ ಸಂಸ್ಥೆಗಳಿಗೆ ಹೆಚ್ಚಿನ ದಂಡಶುಲ್ಕವನ್ನು ವಿಧಿಸಬೇಕು ಅಥವಾ ಸಂಶೋಧನಾ ಮಾನ್ಯತೆಯನ್ನು ರದ್ದುಗೊಳಿಸಬೇಕೆಂದು ತಿಳಿಸುತ್ತಾ, ಸಂಶೋಧನಾ ಕೇಂದ್ರದ ಮಾನ್ಯತೆಗೆ ಪ್ರಸ್ತುತ ವಿಶ್ವವಿದ್ಯಾನಿಲಯವು ನಿಗದಿಪಡಿಸಿರುವ ಶುಲ್ಕಕ್ಕಿಂತ ಹೆಚ್ಚಿನ ಶುಲ್ಕ ವಿಧಿಸುವುದರಿಂದ ವಿಶ್ವವಿದ್ಯಾನಿಲಯಕ್ಕೆ ಆದಾಯ ಬರುತ್ತದೆಂದು ಸಭೆಯಲ್ಲಿ ಪ್ರಸ್ತಾಪಿಸಿದರು.

ಕುಲಸಚಿವ (ಪರೀಕ್ಷಾಂಗ) ಅವರು ಮಾತನಾಡಿ, ಈಗಾಗಲೇ ಸಮಿತಿಯು ಪಿಹೆಚ್.ಡಿ ಮಾರ್ಗಸೂಚಿಗಳನ್ನು ಸಿದ್ಧಪಡಿಸಿ ಶಿಫಾರಸ್ಸು ಮಾಡಿರುವ ವರದಿಯನ್ನು ಮಾನ್ಯ ಕುಲಪತಿಯವರಿಗೆ ಸಲ್ಲಿಸಿದ್ದು, ಸಂಶೋಧನಾ ಕೇಂದ್ರದ ಮಾನ್ಯತೆಯನ್ನು ರದ್ದುಗೊಳಿಸುವ ಮೊದಲು ವಿಶ್ವವಿದ್ಯಾನಿಲಯದಿಂದ ಸಮಿತಿಯನ್ನು ರಚಿಸಿ, ಆ ಸಮಿತಿಯು ಎಲ್ಲಾ ಸಂಶೋಧನಾ ಕೇಂದ್ರಗಳಿಗೂ ಭೇಟಿ ನೀಡಿ, ವರದಿಯನ್ನು ಸಲ್ಲಿಸಿದ್ದ ನಂತರ ಮುಂದಿನ ಕ್ರಮ ತೆಗೆದುಕೊಳ್ಳುವುದು ಸೂಕ್ತವೆಂದು ಅಭಿಪ್ರಾಯಿಸಿದರು.

ಮೇಲ್ಕಂಡ ಸಿಂಡಿಕೇಟ್ ಸದಸ್ಯರುಗಳ ಅಭಿಪ್ರಾಯಗಳನ್ನು ಪರಿಗಣಿಸಿದ ಮಾನ್ಯ ಕುಲಪತಿಯವರು ಮಾತನಾಡಿ, ಪ್ರಸ್ತುತ ಸಂಶೋಧನಾ ಕೇಂದ್ರಕ್ಕೆ ಮಾನ್ಯತೆ ಕೋರಿರುವ ಸಂಸ್ಥೆಗಳಿಗೆ ಮಾನ್ಯತೆ ನೀಡುವುದು. ಎಲ್ಲಾ ಸಂಶೋಧನಾ ಕೇಂದ್ರಗಳಿಂದ ಸಂಶೋಧನಾ ಮಾರ್ಗದರ್ಶಕರುಗಳ ಮಾಹಿತಿಯನ್ನು ಪಡೆದುಕೊಂಡು ಡೀನರುಗಳ ಸಮಿತಿಯು ಪುನರವಲೋಕನ ಮಾಡುವುದು. ಒಂದು ವೇಳೆ ವಿಶ್ವವಿದ್ಯಾನಿಲಯದ ಮಾರ್ಗಸೂಚಿಗಳನ್ನು ಪಾಲಿಸದಿರುವ ಮಾರ್ಗದರ್ಶಕರುಗಳಿಗೆ Guideship ರದ್ದುಗೊಳಿಸಲಾಗುವುದು ಹಾಗೂ ಮಾನ್ಯತೆಯ ಶುಲ್ಕ ಪರಿಷ್ಕರಣೆ ಸಂಬಂಧ Fee Revision Committee ರಚಿಸಿ, ಸಮಿತಿಯ ವರದಿಯನ್ವಯ ಶುಲ್ಕ ಪರಿಷ್ಕರಿಸಲು ಕ್ರಮ ತೆಗೆದುಕೊಳ್ಳಲಾಗುವುದೆಂದು ಸಭೆಯಲ್ಲಿ ಪ್ರಸ್ತಾಪಿಸಿದರು.

4) ಸ್ನಾತಕೋತ್ತರ ಕೇಂದ್ರ, ಮಂಡ್ಯ ಹಾಗೂ ಹಾಸನದಲ್ಲಿ ಮೂಲ ನೇಮಕಾತಿ ಹೊಂದಿರುವ ಅಧ್ಯಾಪಕರುಗಳನ್ನು ಮೈಸೂರು ವಿಶ್ವವಿದ್ಯಾನಿಲಯದ ವಿಭಾಗ/ಕೇಂದ್ರ/ಸಂಸ್ಥೆ ಅಥವಾ ಆಡಳಿತಾತ್ಮಕ ಹುದ್ದೆಗಳಿಗೆ ನಿಯೋಜಿಸಬಾರದು. ಈಗಾಗಲೇ ನಿಯೋಜನೆಗೊಂಡಿರುವ ಅಧ್ಯಾಪಕರುಗಳು ಯಾವ ಕೇಂದ್ರದಲ್ಲಿ ಮೂಲ ನೇಮಕಾತಿ ಹೊಂದಿರುತ್ತಾರೆಯೋ, ಅಲ್ಲಿಗೆ ಹಿಂದಿರುಗಿಸಲು ಸಿಂಡಿಕೇಟ್ ಸಭೆ ತೀರ್ಮಾನಿಸಿತು. ಮುಂದುವರೆದು, ಚಾಮರಾಜನಗರದ ಸ್ನಾತಕೋತ್ತರ ಕೇಂದ್ರದಲ್ಲಿ ಯಾರೂ ಖಾಯಂ ಅಧ್ಯಾಪಕರುಗಳು ಇಲ್ಲದಿರುವುದರಿಂದ ಮೈಸೂರಿನ ಬದಲು ಚಾಮರಾಜನಗರದಲ್ಲಿ ನಿಯೋಜನೆ ಮಾಡಬೇಕೆಂದು ಸಭೆಯಲ್ಲಿ ಪ್ರಸ್ತಾಪಿಸಿದರು. ಈ ಪ್ರಸ್ತಾವನೆಗೆ ಡಾ. ಈ.ಸಿ.ನಿಂಗರಾಜ್ ಗೌಡ, ಶ್ರೀ ಎಸ್.ಡಿ.ದೊಡ್ಡಚಾರಿ ಮತ್ತು ಡಾ. ಎಂ.ಎಸ್.ದಾಮೋದರ ಅವರುಗಳು ಬೆಂಬಲ ಸೂಚಿಸಿದರು.

ಡಾ. ಎಂ.ಎಸ್. ದಾಮೋದರ ಅವರು ಮಾತನಾಡಿ, ಗಾಂಧಿ ಅಧ್ಯಯನ ವಿಭಾಗ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಹಾಗೂ ಪ್ರಸಾರಾಂಗಗಳಲ್ಲಿ ಸ್ನಾತಕೋತ್ತರ ಕೇಂದ್ರ, ಹಾಸನದಲ್ಲಿ ಮೂಲ ನೇಮಕಾತಿ ಹೊಂದಿರುವ ಅಧ್ಯಾಪಕರುಗಳು ಕಾರ್ಯ ನಿರ್ವಹಿಸುತ್ತಿದ್ದಾರೆ. ಆ ಕೇಂದ್ರದ ವಿದ್ಯಾರ್ಥಿಗಳಿಗೆ ಬೋಧನಾ ಕಾರ್ಯವನ್ನು ನಿರ್ವಹಿಸುವ ಬದಲು ಮೈಸೂರು ಕೇಂದ್ರಕ್ಕೆ ನಿಯೋಜನೆ ಮಾಡಿರುವುದು ಸೂಕ್ತವಲ್ಲವೆಂದು ತಿಳಿಸಿದರು.

ಪ್ರೊ. ಜಿ.ವೆಂಕಟೇಶ್‌ಕುಮಾರ್ ಅವರು ಮಾತನಾಡಿ, ಈ ಸಂಬಂಧ ಹಲವು ಸಿಂಡಿಕೇಟ್ ಸಭೆಗಳಲ್ಲಿ ವಿಷಯವನ್ನು ಮಂಡಿಸಿ, ಸಭೆಯು ತೀರ್ಮಾನ ತೆಗೆದುಕೊಂಡಿರುತ್ತದೆ. ಆದರೆ, ಅನುಷ್ಠಾನಗೊಂಡಿರುವುದಿಲ್ಲವೆಂದು ಸಭೆಯಲ್ಲಿ ಹೇಳಿದರು.

ಮಾನ್ಯ ಕುಲಪತಿಯವರು ಮಾತನಾಡಿ, ವಿಶ್ವವಿದ್ಯಾನಿಲಯದ ಶೈಕ್ಷಣಿಕ ಹಾಗೂ ಆಡಳಿತ ಹಿತದೃಷ್ಟಿಯಿಂದ ಈ ವಿಷಯವನ್ನು ಪುನರವಲೋಕನ ಮಾಡಿ, ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದೆಂದು ತಿಳಿಸಿದರು.

5) ಪ್ರೊ. ಜಿ.ವೆಂಕಟೇಶ್‌ಕುಮಾರ್ ಅವರು ದಿನಾಂಕ: 22-08-2022ರಂದು ಪ್ರಾಧಿಕಾರ ವಿಭಾಗಕ್ಕೆ ಪತ್ರವನ್ನು ರವಾನಿಸಲಾಗಿದ್ದು, ಆರನೇ ಸಾಮಾನ್ಯ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿದ ಕಾರ್ಯಸೂಚಿ ಕ್ರಮ ಸಂಖ್ಯೆ: 2022/6.30 ಹಾಗೂ 2022/6.31 ಕುರಿತು ಚರ್ಚೆಯನ್ನು ಮುಂದುವರೆಸಿ, ಸರ್ಕಾರದ ಅಧೀನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ ಪತ್ರ ದಿನಾಂಕ: 26-07-2022 (ಮೈಸೂರು ವಿಶ್ವವಿದ್ಯಾನಿಲಯ 2021ನೇ ಸಾಲಿನ ಲೆಕ್ಕ ಪರಿಶೋಧನೆಯಲ್ಲಿ ಅರ್ಥ ಸಂಹಿತೆಯ ಅನುಚ್ಛೇದ 15ರ ಉಲ್ಲಂಘನೆಯಂತಹ ಪ್ರಕರಣಗಳ ಬಗ್ಗೆ) ದ ಮಾಹಿತಿಯನ್ನು ಕುಲಸಚಿವರು ಹಾಗೂ ಹಣಕಾಸು ಅಧಿಕಾರಿಗಳು ಸಭೆಯ ಗಮನಕ್ಕೆ ತರದೇ ಸಮಜಾಯಿಷಿ

ನೀಡಿರುತ್ತಾರೆ. ಆದ್ದರಿಂದ, ಈ ಮಾಹಿತಿ ನೀಡುವವರೆಗೆ ಕಾರ್ಯಸೂಚಿ ಕ್ರಮ ಸಂಖ್ಯೆ: 2022/6.30 ಹಾಗೂ 2022/6.31 ಗಳಿಗೆ ಒಪ್ಪಿಗೆ ಇರುವುದಿಲ್ಲವೆಂದು ತಿಳಿಸಿರುತ್ತಾರೆ.

6) ಶ್ರೀ ಎಸ್.ಡಿ. ದೊಡ್ಡಚಾರಿ ಅವರು ಮಾತನಾಡಿ, ಶ್ರೀ ಟಿ.ಸಿ.ನಾರಾಯಣ, ಪ್ರಥಮ ದರ್ಜೆ ಗುಮಾಸ್ತರು, ಆಡಳಿತಾಧಿಕಾರಿಗಳ ಕಛೇರಿ, ಮಾನಸಗಂಗೋತ್ರಿ, ಮೈಸೂರು ಇವರ ಪದೋನ್ನತಿಗೆ ಸಂಬಂಧಿಸಿದಂತೆ ಹಲವಾರು ಬಾರಿ ಸಭೆಯಲ್ಲಿ ಚರ್ಚಿಸಿ, ಪದೋನ್ನತಿ ನೀಡಲು ತೀರ್ಮಾನವಾಗಿದ್ದರೂ ಸಹ ಕಾರಣಾಂತರಗಳಿಂದ ಪದೋನ್ನತಿ ನೀಡಿರುವುದಿಲ್ಲ. ಸದರಿ ಉದ್ಯೋಗಿಯು ದ್ವಿತೀಯ ದರ್ಜೆ ಗುಮಾಸ್ತರಿಂದ ಪ್ರಥಮ ದರ್ಜೆ ಗುಮಾಸ್ತರ ಹುದ್ದೆಗೆ ಪದೋನ್ನತಿ ಹೊಂದಿ ಆರು ವರ್ಷ ಪೂರ್ಣಗೊಂಡಿರುತ್ತದೆ. ಆದುದರಿಂದ, ಸದರಿ ಸಿಂಡಿಕೇಟ್ ಸಭೆಯಲ್ಲಿ ಶ್ರೀ ಟಿ.ಸಿ.ನಾರಾಯಣ ಅವರಿಗೆ ಪದೋನ್ನತಿ ನೀಡಬೇಕು ಅಥವಾ 2017ರಲ್ಲಿ ಜಾರಿಗೊಳಿಸಲಾಗಿದ್ದ ಆದೇಶವನ್ನು ಹಿಂಪಡೆಯುವುದು. ಈ ಎರಡು ವಿಷಯಗಳಲ್ಲಿ ಒಂದನ್ನು ಅಂತಿಮವಾಗಿ ಸಭೆಯು ನಿರ್ಣಯಿಸಲೇಬೇಕೆಂದು ಆಗ್ರಹಿಸಿದರು.

ಈ ಸಂಬಂಧ ಸುದೀರ್ಘವಾಗಿ ಚರ್ಚಿಸಿದ ಸಿಂಡಿಕೇಟ್ ಸಭೆಯು, "ಶ್ರೀ ಟಿ.ಸಿ.ನಾರಾಯಣರವರ ಪದೋನ್ನತಿಯನ್ನು 2022ನೇ ಸಾಲಿನಲ್ಲಿ ನಿವೃತ್ತರಾಗುವವರ ಪಟ್ಟಿಯ ಕ್ರಮ ಸಂಖ್ಯೆ: 30 ರ ಉದ್ಯೋಗಿಯಾದ ಶ್ರೀ ಪಿ.ಡಿ.ಮಾದೇಗೌಡ, ಸಹಾಯಕ ಕುಲಸಚಿವರು ಇವರು ದಿನಾಂಕ: 31-08-2022 ರಂದು ನಿವೃತ್ತಿ ಆಗುವ ಹುದ್ದೆಗೆ ಎದುರಾಗಿ ಪದೋನ್ನತಿ ನೀಡಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು".

ಅಂತಿಮವಾಗಿ ಮಾನ್ಯ ಕುಲಸಚಿವರು ಸಭೆಯಲ್ಲಿ ಮುಕ್ತವಾಗಿ ಚರ್ಚಿಸಿ, ಸೂಕ್ತ ನಿರ್ಣಯಗಳನ್ನು ತೆಗೆದುಕೊಳ್ಳಲು ಸಹಕರಿಸಿದ ಎಲ್ಲಾ ಸದಸ್ಯರುಗಳಿಗೆ ವಂದನೆಗಳನ್ನರ್ಪಿಸುವ ಮೂಲಕ ಸಭೆಯು ಮುಕ್ತಾಯವಾಯಿತು.

ಕುಲಸಚಿವ ಹಾಗೂ ಸದಸ್ಯ ಕಾರ್ಯದರ್ಶಿ

ಕುಲಪತಿಗಳು ಹಾಗೂ ಅಧ್ಯಕ್ಷರು